International Journal of Kannada Research
www.kannadajournal.com

ISSN: 2454–5813
IJSR 2015; 1(2): 01-06
© 2015 IJKS
www.kannadajournal.com
Received: 01-07-2015
Accepted: 02-08-2015

**Shri Sardar Rayappa Soppi**
Research Student, Gulbarga University, Kalaburagi.

**Correspondence**
**Shri Sardar Rayappa Soppi**
Research Student, Gulbarga University, Kalaburagi.

# ಹೈದ್ರಾಬಾದ ಕರ್ನಾಟಕ ಪತ್ರಿಕೆಗಳ ಐತಿಹಾಸಿಕ ಅಧ್ಯನ" ರಾಯಚೂರು ಜಿಲ್ಲಾ ಪತ್ರಿಕೋದ್ಯಮ

**Shri Sardar Rayappa Soppi**

ಕರ್ನಾಟಕ ಮತ್ತು ಭಾರತದ ಇತಿಹಾಸದ ಸಂದರ್ಭದಲ್ಲಿ ರಾಯಚೂರು ಜಿಲ್ಲೆಗೆ ವಿಶಿಷ್ಟವಾದ ಸ್ಥಾನವಿದೆ. ಇತಿಹಾಸ ಪೂರ್ವದ ಶಿಲಾಶಾಸನ ಸಂಸ್ಕೃತಿಯ ಕುರುಹುಗಳು ಲಭ್ಯವಾಹಿರುವ ಈ ಜಿಲ್ಲೆಯಲ್ಲಿ ಇತಿಹಾಸ ಪೂರ್ವದ ನಂದರ ಆಳ್ವೀಕೆಯಿಂದ ದೇಶ ಸ್ವಾತಂತ್ರ್ಯವಾಗಿ ೧೯೪೮ರಲ್ಲಿ ಅಸಫ ಜಾಹಿ ನಿಜಾಂ ಆಡಳಿತದಿಂದ ವಿಮೋಚನೆ ಹೊಂದುವವರೆಗೂ ಹಲವು ಹತ್ತು ಸಾಮ್ರಾಜ್ಯಗಳ ಮಡಿಲಲ್ಲಿ ಬೆಳೆದು ಬಂದಿದೆ.

ಬಾಷಿಕವಾಗಿ ರಾಯಚೂರು ಹೈದ್ರಾಬಾದ ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಭಿನ್ನವಾಗಿಲ್ಲ. ಹಲವಾರು ದಶಕಗಳ ಕಾಲ ನಿಜಾಂಧಾಹಿ ಹಿಡಿತದಲ್ಲಿ ಇದ್ದುದರ ಪರಿಣಾಮವಾಗಿ ಇಲ್ಲಿ ಉರ್ದು ಒಂದು ಪ್ರಬಲ ಭಾಷಯಾಗಿ ಬೆಳೆದು ಬಂದಿದೆ. ಅಂತೆಯೇ, ಆಂಧ್ರ ಪ್ರದೇಶಕ್ಕೆ ತೀರಾ ನಿಕಟವಾಗಿ ಹೊಂದಿಕೊಂಡಿರುವುದರಿಂದ ಇಲ್ಲಿ ತೆಲುಗು ಭಾಷ ಕೂಡಾ ತನ್ನ ಪ್ರಾಬಲ್ಯ ಮೆರೆದಿದೆ. ಇಂದಿಗೂ ತೆಲುಗು ಬಲಾಢ್ಯವಾಗಿಯೇ ಮುಂದುವರೆದಿದೆ.

ತನ್ನ ಸಹೋದರಿ ಜಿಲ್ಲೆಳಾದ ಗುಲ್ಬರ್ಗಾ– ಬೀದರಗಳಂತೆ ಇಲ್ಲಿಯೂ ಕನ್ನಡ ಭಾಷ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಇದ್ದುದರಿಂದ ಕನ್ನಡ ಪತ್ರಿಕೋದ್ಯಮ ಬೆಳೆದು ಬರಲು ತನ್ನದೆ ಆದ ವಿಳಂಬದ ಕಾಲ ಹಿಡಿಯಿತು. ಸಾಮಾಜಿಕವಾಗಿ, ಆಥಿಕವಾಗಿ, ಸೈಕ್ಷಣಿಕವಾಗಿ ತೀರಾ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿರುವ ರಾಯಚೂರು ಈಗೀಗ ಅಭವೃದ್ಧಿಯ ಮುಖ್ಯವಾಹಿನಿಗೆ ಸೇರುತ್ತಿದೆ.

೧೯೦೫ರ ವರೆಗೆ ರಾಯಿಚೂರು ಪ್ರದೇಶವು ರಾಯಿಚೂರು ಹಾಗೂ ಲಿಂಗಸುಗೂರು ಜಿಲ್ಲೆಗಳಲ್ಲಿ ಹಂಚಿ ಹೋಗಿತ್ತು. ಆ ಕಾಲದಲ್ಲಿ ರಾಯಚೂರು ಜಿಲ್ಲೆಯು ರಾಯಚೂರು, ಯದಗಿರಿ, ದೇವದುರ್ಗ, ಮಾನವಿ, ಆಲಂಪುರ ಮತ್ತು ಗದ್ವಾಲ ತಾಲೂಕುಗಳನ್ನು ಹೊಂದಿದ್ದರೆ, ಲಿಂಗಸುಗೂರು ಜಿಲ್ಲೆಯ ಲಿಂಗಸುಗೂರು, ಕುಷ್ಟಗಿ, ಗಂಗಾವತಿ, ಸಿಂದನೂರ, ಶಹಪುರ ಮತ್ತು ಸುರಪುರ ತಾಲೂಕುಗಹಳನ್ನು ಒಳಗೊಂಡಿತ್ತು. ಕೊಪ್ಪಳ ಮತ್ತು ಯಲಬುರ್ಗ ತಾಲೂಕುಗಳು ಹೈದ್ರಾಬಾದ ನಿಜಂ ಸಂಸ್ಥಾನದ ಪ್ರಧಾನ ಮಂತ್ರಿಗಳಾಗಿದ್ದ ಸಾಲಾರ ಜಂಗ್ ಅವರ ಜಹಗೀರಗಳಾಗಿದ್ದವು.

೧೯೦೫ರಲ್ಲಿಲಿಂಗಸುಗೂರು ಜಿಲ್ಲೆಯನ್ನು ರದ್ದುಗೊಳಿಸಿ ರಾಯಚೂರು ಜಿಲ್ಲೆಗೆ ಸೇರಿಸಲಾಯಿತು. ಇದೇ ಸಮಯಕ್ಕೆ ಯಾದಗಿರಿ, ಶಹಾಪುರ ಮತ್ತು ಸುರಪುರ ತಾಲೂಕುಗಳನ್ನು ಗುಲ್ಬರ್ಗಾ ಜಿಲ್ಲೆಗೆ ಒಳಪಡಿಸಲಾಯಿತು.

೧೯೪೯ರಲ್ಲಿ ಜಹಗೀರು ಪದ್ಧತಿಯ ರದ್ಧತಿಯಿಂದಾಗಿ ಕೊಪ್ಪಳ ಮತ್ತು ಯಲಬುರ್ಗಾ ತಾಲೂಕುಗಳು ರಾಯಚೂರು ಜಿಲ್ಲೆಯ ಭಾಗಗಳಾದವು. ಭಾಷಾವಾರು ಪ್ರಾಂತಗಳ ರಚನೆಯಾಗಿ ೧೯೫೬ರಲ್ಲಿ ಮೈಸೂರು ರಾಜ್ಯ ಉದಯವಾದಾಗ ರಾಯಚೂರು ಜಿಲ್ಲೆಯ ಭಾಗಗಳಾಗಿದ್ದ ಗದ್ವಾಲ ಮತ್ತು ಆಲಂಪುರಗಳನ್ನು ಆಂದ್ರಪ್ರದೇಶಕ್ಕೆ ವರ್ಗಾಯಿಸಲಾಯಿತು. ಅಂದಿನಿಂದ ೧೯೯೭ರ ವರೆಗೆ ರಾಯಚೂರು ಜಿಲ್ಲೆ ಒಂಭತ್ತು ತಾಲೂಕುಗಳನ್ನು ಹೊಂದಿ ಕರ್ನಾಟಕ ಅತಿ ದೊಡ್ಡ ಭೌಗೋಳಿಕ ವ್ಯಾಪ್ತಿಯ ಜಿಲ್ಲೆಯಾಗಿತ್ತು. ರಾಯಚೂರು, ದೇವದುರ್ಗ, ಲಿಂಗಸುಗೂರು, ಮಾನ್ವಿ, ಸಿಂಧನೂರು ಗಂಗಾವತಿ ಕೊಪ್ಪಳ, ಕುಷ್ಟಗಿ ಮತ್ತು ಯಲಬುರ್ಗ ಇವೇ ಒಂಭತ್ತು ತಾಲೂಕುಗಳು.

೧೯೯೭ರಲ್ಲಿ ಜಿಲ್ಲೆಯ ಪುನರವಿಂಗಡಣೆಯಾದಾಗ ಕೊಪ್ಪಳ ಹೊಸ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ರಾಯಚೂರು ಜಿಲ್ಲೆಯಲ್ಲಿ ಬರೀ ಐದು ತಾಲೂಕುಗಳು ಮಾತ್ರ ಉಳಿದುಕೊಂಡವು. ಅವುಗಳೆಂದರೆ, ರಾಯಚೂರು, ದೇವದುರ್ಗ, ಲಿಂಗಸುಗೂರು, ಮಾನ್ವಿ ಮತ್ತು ಸಿಂಧನೂರು.

ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಮಧ್ಯ ಪವಡಿಸಿ ಅತ್ಯಂತ ಫಲವತ್ತಾದ ನೆಲವನ್ನು ಹೊಂದಿರುವ ರಾಯಚೂರು ಜಿಲ್ಲೆಗೆ 'ದೋ ಆಬ್' ಎಂತಲೂ, ಎಡೆದೊರೆ ನಾಡು ಎಂತಲೂ ಕರೆಯಲಾಗುತ್ತಿತ್ತು. 'ದೋ ಆಬ್' ಎಂದರೆ ಎರಡು ನದಿಳ ನಡುವಿನ ಪ್ರದೇಶವೆಂದರ್ತ

**ಪ್ರಾಚೀನ ಕುರುಹು:** ಇತಿಹಾಸದ ಬಗ್ಗೆ ಸ್ಪಷ್ಟ ಕಲ್ಪನೆಯನ್ನು ನೀಡಬಹುದಾದ ರಾಜ ಮಹಾರಾಜರು ಬರೆಯಿಸಿ ಸ್ಥಾಪಿಸಿದ ಶಿಲಾಶಾಸನಗಳು ಪ್ರಾಚೀನ ಹಾಗೂ ಮಧ್ಯಯುಗದ ಕಾಲದಲ್ಲಿ ಪತ್ರಿಕೆಗಳ ಪಾತ್ರವನ್ನು ನಿರ್ವಹಿಸಿವೆ ಎಂದು ಹೇಳಿದರೆ ಪ್ರಮಾದವಾಗಲಕ್ಕಿಲ್ಲ. ಶಾಸನಗಳ ವಸ್ತು, ವಿಷಯ ಏನೇ ಇರಲಿ ಅವುಗಳ ಉದ್ದೇಶ ಮಾತ್ರ ಸ್ಪಷ್ಟ. ಶಾಸನೋಕ್ತ ಸಂಗತಿ ಬಹುಕಾಲ ಜನರಿಗೆ ತಿಳಿದಿರಲಿ ಎಂಬುವುದೇ ಆಗಿದೆ. ಶಿಲಾಶಾಸನಗಳು ಇತಿಹಾಸ ಪುರಾವೆಗಳಾಗಿವೆ. ಸಮೂಹ ಸಂವಹನ ಕ್ರಿಯೆಯಲ್ಲಿ ಅವು ಭಾರತದಲ್ಲಿ ಮಹತ್ವದ ಪಾತ್ರವಹಿಸಿವೆ.

ಇದನ್ನೇ ಆಧಾರವಾಗಿಟ್ಟುಕೊಂಡು ಹೇಳುವುದಾದರೆ ರಾಯಚೂರು ಜಿಲ್ಲೆಯಲ್ಲಿ ಸುಮಾರು ೨೩೦೦ ವರ್ಷಗಳ ಹಿಂದೆಯೇ ಪತ್ರಿಕೋದ್ಯಮ ಚಾಲ್ತಿಯಲ್ಲಿತ್ತೆಂದು ಹೇಳಬಹುದೇನೋ ! ರಾಯಿಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮಸ್ಕಿಯ ಗುಡ್ಡದ ಒಂದು ಬಂಡೆಯ ಮೇಲೆ ಕೆತ್ತಿಸಲಾದ ಶಾಸನವೊಂದು ಪತ್ತೆಯಾದ ಮೇಲೆ ಇಡೀ ಭಾರತ ದೇಶದ ಇತಿಹಾಸವನ್ನು ನೈಜ ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಮಾರ್ಗವನ್ನೇ ಶೋಧಿಸಿದಂತಾಯಿತು.

ಭಾರತದ ಅನೇಕ ಕಡೆಗಳಲ್ಲಿ ಮತ್ತು ಕರ್ನಾಟಕದಲ್ಲೂ ಕೂಡ 'ದೇವನಾಂ ಪ್ರಿಯದರ್ಶಿ, ಬರೆಯಿಸಿದ ಅನೇಕ ಶಾಸನಗಳು ದೊರೆತಿವೆಯಷ್ಟೆ. ಈ ಶಾಸನಗಳಲ್ಲಿ ಬರುವ 'ದೇವನಾಂ ಪ್ರಿಯದರ್ಶಿ, ಯಾರು ಎಂಬುವುದು ನಿಗೂಢವಾಗೇ ಉಳಿದಿತ್ತು. ಈ ವ್ಯಕ್ತಿಯನ್ನು ಹುಡುವುದರಲ್ಲಿ ಇತಿಹಾಸದ, ಶಾಸನ ಶಾಸ್ತ್ರದ ಮಹಾಮಹಿಮರು ತಡಕಾಡುತ್ತಿದ್ದರು. ಈ ರಹಸ್ಯವನ್ನು ಮೊಟ್ಟ ಮೊದಲ ಬಾರಿಗೆ ಬೇಧಿಸಿದ ಕೀರ್ತಿ ಮಸ್ಕಿಗೆ ಸಲ್ಲುತ್ತದೆ.

೧೯೧೫ನೇ ಇಸವಿಯಲ್ಲಿ ಚಿನ್ನದ ಗಣಿಗಳಿಗೆ ಸಂಬಂಧಿಸಿದ ಸಿ. ಬೀಡನ್ ಎಂಬ ಇಂಜಿನೀಯರ್ ಮಸ್ಕಿ ಗುಡ್ಡದಲ್ಲಿ ಅಲೆದಾಡತ್ತಿದ್ದಾಗ ಆ ವರ್ಷದ ಜನವರಿ ೨೭ನೇ ತಾರೀಖಿನಂದು ಅವನಿಗೆ ಗುಡ್ಡದ ಬಂಡೆಯೊಂದರ ಮೇಲೆ ಕೆತ್ತಾಲ್ದ ಲಿಪಿ ಕಣ್ಣಿಗೆ ಬಿತ್ತು. ಖ್ಯಾತ ಶಾಸನ ತಜ್ಞರಾದ ಕನ್ನಡಿಗ ಹೊಸಕೋಟೆ ಕೃಷ್ಣ ಶಾಸ್ತ್ರಿಗಳು ಈ ಶಾಸನದ ಮೂಲ ಪಾಠವನ್ನು ಮತ್ತು ಭಾಷಾಂತರವನ್ನು ಪ್ರಕಟಿಸಿದರು. ಇದರಿಂದ ಇತಿಹಾಸಕಾರರ, ಸಂಶೋಧಕರ ವಲಯದಲ್ಲಿ ಒಂದು ಅಭೂಪೂರ್ವ ಸಂಚಲನ ಉಂಟಾಯಿತು. ಯಾಕೆಂದರೆ ಈ ಶಾಸನದಲ್ಲಿ 'ದೇವನಾಂ ಪ್ರಿಯ ಪ್ರಿಯದರ್ಶಿ' ಎಂಬುವುದರ ಜೊತೆಗೆ ಮೊಟ್ಟ ಮೊದಲ ಬಾರಿಗೆ ಅಶೋಕ ಎಂಬ ಹೆಸರಿದ್ದುದು ಕಂಡು ಬಂತು !

ಇದರಿಂದ ಈ ಶಾಸನವನ್ನು ಬರೆಯಿಸಿದವನು ಬೇರೆ ಯಾರೂ ಆಗಿರದೆ ಮೌರ್ಯ ಸಾಮ್ರಾಜ್ಯದ ಮಹಾನ್ ಚಕ್ರವರ್ತಿ ಅಶೋಕ ! ಇದರಿಂದ ದೇಶದ ಬೇರೆ ಬೇರೆ ಭಾಗಗಳಲ್ಲಿ ದೊರೆತ ಶಾಸನಗಳ ಕರ್ತೃವೂ ಸಾಮ್ರಾಟ ಅಶೋಕನೇ ಎಂಬುವುದು ನಿಶ್ಚಿತವಾಯಿತು. ಮಸ್ಕಿ ಶಾಸನದಲ್ಲಿ 'ದೇವನಾಂ ಪ್ರಿಯ ಪ್ರಿಯದರ್ಶಿ' ಎಂಬವುದರ ಜೊತೆಗೆ ಅಶೋಕ ತನ್ನ ಹೆಸರನ್ನು ಸೇರಿಸಿರುವುದು ಭಾರತದ ಇತಿಹಾಸ ಪುನರಾವಲೋಕನದ ದೃಷ್ಟಿಯಿಂದ ಅತ್ಯಂತ ಮಹತ್ವವಾದದ್ದು. ಇದರಿಂದಾಗಿ ರಾಯಚೂರು ಜಿಲ್ಲೆಯ ಮಸ್ಕಿಗೆ ಭಾರತದ ಇತಿಹಶಸದಲ್ಲಿ ಶಾಶ್ವತವಾದ ವಿಶಿಷ್ಟಸ್ಥಾನ ದೊರಕಿದಂತಾಗಿದೆ.

ಮಸ್ಕಿಯ ಶಾಸನದ ಕಾಲ ಕ್ರಿ. ಶ. ಪೂ. ಸುಮಾರು ೨೫೬. ಪ್ರಾಚೀನ ಪ್ರಾಕೃತದ ಭಾಷೆಯಲ್ಲಿರುವ ಈ ಶಾಸನದ ಲಿಪಿ ಬ್ರಾಹ್ಮೀಯಲ್ಲಿದೆ. ಅದರಲ್ಲಿ ಹೀಗೆ ಹೇಳಿದೆ.

"ಇದು ದೇವರಿಗೆ ಪ್ರಿಯನಾದ ಅಶೋಕ ರಾಜನ ಘೋಷಣೆ. ಈಗ ಎರಡುವರೆ ಸಂವತ್ಸರಗಳ ಆಚೆಯ ಕಾಲದಿಂದ ನಾನು ಬುದ್ಧದೇವನ ಅನುಯಾಯಿಯಾಗಿದ್ದೇನೆ. ಈಗ ಒಂದು ಸಂವತ್ಸರಕ್ಕೆ ಅಧಿಕ ಕಾಲದಿಂದ ನಾನು ಬುದ್ಧ ಸಂಘದಲ್ಲಿ ಆಸಕ್ತಿ ಉಳ್ಳವನಾಗಿ ಶ್ರದ್ಧೆಯಿಂದ ಶ್ರಮಿಸುತ್ತಲಿದ್ದೇನೆ. ಇದರ ಫಲವಾಗಿ, ಈ ಜಂಬೂ ದ್ವೀಪದಲ್ಲಿ ಹಿಂದೆ ದೇವರುಗಳು ಮಾನವರೊಡನೆ ಮಿಳಿತರಾಗಿರಲಿಲ್ಲ. ಈಗ ಮಿಳಿತರಾಗಿದ್ದಾರೆ."

"ನಾನು ಶಧಿಸಿದ ಈ ಕಾರ್ಯವನ್ನು ಬಡವನಾದರೂ ಸಾಧಿಸಬಹುದು. ಆದರೆ ಆತನಿಗೆ ಧರ್ಮದಲ್ಲಿ ಶ್ರದ್ಧೆ ಮಾತ್ರ ಅವಶ್ಯಕ. ಈ ಕಾರ್ಯ ಬಲ್ಲಿದರಿಗೆ ಮಾತ್ರ ಸಾಧ್ಯವೆಂದು ಯಾರೂ ತಿಳಿಯಲಾಗದು. ಬಡವರಾಗಲಿ–ಬಲ್ಲಿದವರಾಗಲಿ ಈ ಮತನ್ನು ಕೇಳಬೇಕು. ನೀ ಈ ಮಾರ್ಗವನ್ನು ಅನುಸರಿಸುವಿರಾದರೆ ಈ ಘನ ಸಾಧನೆ ಬಹುಕಾಲ ಬಾಳೀತು."

ಮಸ್ಕಿಯ ಶಾಸನ ಅಶೋಕನ ಮಹತ್ವದ ಧರ್ಮಶಾಸನಗಳಲ್ಲೊಂದುಗಿದೆ. ಧರ್ಮ ಕಾರ್ಯವನ್ನು ಸಾಧಿಸುವದು ಎಲ್ಲರಿಂದಲೂ ಸಾದ್ಯ ಎಂಬುವುದೇ ಈ ಶಾಸನದ ಇಂಗಿತವಾಗಿದೆ. ಧರ್ಮದ ಕಾರ್ಯವನ್ನು ಗೌತಮ ಬುದ್ಧನ ತತ್ವಾದರ್ಶಗಳ ಮೂಲಕ ಸಾಧಿಸಬೇಕೆಂಬ ಆಯವೂ ಇದೆ. ಸುಮಾರು ಎರಡುವರೆ ಸಾವಿರ ವರ್ಷಗಳ ಹಿಂದೆ ಕಲ್ಲಿನ ಮೇಲೆ ಕೆತ್ತಿಸಲಾದ ಈ ಶಾಸನ ಯಾವುದೆ ಸಮೂಹ ಸಂಪರ್ಕ ಮಾಧ್ಯಮ ಮಾಡದ ಐತಿಹಾಸಿಕ ಸಂಚಲವನ್ನುಂಟು ಮಾಡಿದೆ.

**ಮೊದಲ ಪತ್ರಿಕೆ:** ಅವಿಭಜಿತ ರಾಯಚೂರು ಜಿಲ್ಲೆಯ ಮೊಟ್ಟಮೊದಲ ಪತ್ರಿಕೆ ಎಂದರೆ ೧೯೧೯–೨೧ರ ಅವಧಿಯಲ್ಲಿ ಕೊಪ್ಪಳದಿಂದ ಪ್ರಕಟವಾದ 'ಭಕ್ತಬಂಧು' ಎಂಬ ಕನ್ನಡ ಮಾಸಿಕ. ಇದು ಹೈದ್ರಾಬಾದ ಕರ್ನಾಟಕ ಪ್ರದೇಶದ ಮೊದಲ ಪತ್ರಿಕೆಗಳಲ್ಲಿ ಒಂದು. ಇದು ಪ್ರಾಯಶ ಹೈದ್ರಾಬಾದ ಕರ್ನಾಟಕದ ಮೊಟ್ಟ ಮೊದಲ ಕನ್ನಡ ಪತ್ರಿಕೆಯೂ ಹೌದು. ಎಚ್. ಚಿದಂಬರಯ್ಯ ಸಂಪಾದಕರಾಗಿದ್ದ ಈ ಪತ್ರಿಕೆ ಕೊಪ್ಪಳವಲ್ಲದೆ ಬೆಂಗಳೂರು, ದಾವಣಗೆರೆಯಿಂದಲೂ ಪ್ರಕಟವಾಗುತ್ತಿತ್ತು.

೧೯೨೨ರ ಸುಮಾರಿನಲ್ಲಿ 'ಧರ್ಮ ಸಂಜೀವಿನಿ' ಎಂಬ ಮಾಸ ಪತ್ರಿಕೆಯನ್ನು ನಾಯಕಲ್ ಬಸವರಾಜ ಶಾಸ್ತ್ರಿಗಳು ಇದರ ಸಂಪಾದಕರಾಗಿದ್ದರು. ರಾಯಚೂರಿನಲ್ಲಿ ಉತ್ತಮ ಮುದ್ರಣ ಸೌಲಭ್ಯ ಇಲ್ಲದಿದ್ದುದರಿಂದ ಪತ್ರಿಕೆಯನ್ನು ಬೆಂಗಳೂರಿನ ಟಿ.ಎನ್. ಚನ್ನಪ್ಪನವರ 'ಮಾಡಲ್ ಮುದ್ರಾಕ್ಷರ ಶಾಲೆ'ಯಿಂದ ಮುದ್ರಿಸಿ ತಂದು ರಾಯಚೂರಿನಲ್ಲಿ ಪ್ರಸಾರ ಮಾಡಲಾಗುತ್ತಿತ್ತು.

೧೯೨೬ನೇ ಜನವರಿಯಿಂದ ಈ ಪತ್ರಿಕೆ ಯಾದಗಿರಿಯ ಶ್ರೀ ಶಂಕರಾನಂದ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಣಗೊಳ್ಳತೊಡಗಿತು. ತೀರಾ ಹದಗೆಟ್ಟ ಆರ್ಥಿಕ ಸ್ಥಿತಿಯಿಂದಾಗಿ ೧೯೩೦ರಲ್ಲಿ ಪತ್ರಿಕೆ ನಿಂತು ಹೊಯಿತು. 'ಧರ್ಮ ಸಂಜೀವಿನಿ' ಮೂಲತಃ ವೀರಶೈವ ಧರ್ಮ ಪ್ರಚಾರಕ್ಕೆ ಮಹತ್ವ ಕೊಟ್ಟಂತಹ ಪತ್ರಿಕೆ. ವಚನ ಸಾಹಿತ್ಯ ಪ್ರಕಟಣೆ, ಪ್ರಸಾರಕ್ಕೂ ಅದು ವೇದಿಕೆಯಾಗಿತ್ತು. ಮೊದ ಮೊದಲು ಧಾರ್ಮಿಕ ವಿಷಯಗಳಿಗೆ ವತ್ತು ಕೊಟ್ಟಿದ ಪತ್ರಿಕೆ ಕ್ರಮೇಣ ತನ್ನ ಧೋರಣೆನ್ನು ಬದಲಿಕೊಂಡಿತು.

ಸ್ವಾತಂತ್ರ್ಯಪೂರ್ವದಲ್ಲಿ ೧೯೪೦ರಲ್ಲಿ ಹೊರಬಂದ 'ದಕ್ಕನ್ ಪ್ರಭಾತ' ಒಂದು ಪ್ರಮುಖ ವಾರಪತ್ರಿಕೆ. ಪೋತಾಪುರ ರಾಚೋಟಯ್ಯ ಅವರು ಅದರ ಸಂಪಾದಕರಾಗಿದ್ದು ಅಂದಿನ ಜಿಲ್ಲಾಧಿಕಾರಿಯಾಗಿದ್ದ ಜಹೀರ ಅಹ್ಮದ್ ಅವರು ಪತ್ರಿಕೆಯನ್ನು ಬಿಡುಗಡೆ ಮಾಡಿದ್ದರು. ಇದರ ಮೊದಲ ಸಂಚಿಕೆಯನ್ನು ೯–೧೧–೧೯೪೦ರಂದು ಬಿಡಗಡೆ ಮಾಡಲಾಯಿತು. ಇದನ್ನು ದಿನ ಪತ್ರಿಕೆಯನ್ನಾಗಿ ಮಾಡುವ ಪ್ರಯತ್ನ ಮಾಡಲಾಯಿತಾದರೂ ಅದು ಯಶಸ್ವಿಯಾಗಲಿಲ್ಲ. ಸುಮಾರು ಐದು ವರ್ಷಗಳಕಾಲ ಈ ಭಾಗದ ಕನ್ನಡಿಗರ ಪತ್ರಿಕಾ ವಾಚನದ ಅಗತ್ಯ ಪೂರೈಸಿದ ಪತ್ರಿಕೆ ಆರ್ಥಿಕ ಮಿಗ್ಗಟ್ಟು ಮತ್ತು ಇತರ ಅಡಚಣೆಗಳಿಂದಾಗಿ ನಿಂತು ಹೋಯಿತು.

ಸಂಪಾದಕ ರಾಚೋಟಯ್ಯ ತಮ್ಮ ಸ್ವಂತ ಗೌರಿಶಂಕರ ಮುದ್ರಾಣಲಯದಲ್ಲಿ ಪತ್ರಿಕೆಯನ್ನು ಅಚ್ಚು ಮಾಡುತ್ತಿದ್ದರು. ಬರೀ ರಾಯಿಚೂರು ಜಿಲ್ಲೆಯಲ್ಲಷ್ಟೆ ಅಲ್ಲ ಇಡೀ ಹೈದ್ರಾಬಾದ ಕರ್ನಾಟಕದಲ್ಲಿ ಅದು ತಕ್ಕಷ್ಟು ಜನಪ್ರಿಯವಾಯಿತು

೧೯೪೪ರಲ್ಲಿ ದತಾತ್ರೇಯ ಅವರಾದಿ ಮತ್ತು ಎಸ್. ಹನುಮಂತರಾವ್ ಅವರ ಜಂಟಿ ಸಂಪಾದಕತ್ವದಲ್ಲಿ ಗುಲ್ಬರ್ಗಾದಲ್ಲಿ 'ನಾಗರಿಕ' ಎಂಬ ಉಜ್ವಲ ರಾಷ್ಟ್ರೀಯವಾದದ ವಾರ ಪತ್ರಿಕೆಯನ್ನು ಆರಂಭಿಸಲಾಯಿತು. ಎರಡು ವರ್ಷಗಳ ನಂತರ ೧೯೪೬ರಲ್ಲಿ ಅದು ರಾಯಚೂರುಗೆ ವರ್ಗವಾಯಿತು. ನಿಜಾಂ ಸರಕಾರದ ಕೆಂಗಣ್ಣಿಗೆ ಗುರಿಯಾಗಿದ್ದ ಈ ಪತ್ರಿಕೆ ಸರಕಾರದ ನಿರಂತರ ದಬ್ಬಾಳಿಕೆ, ಕ್ರೌರ್ಯದ ಕ್ರಮಗಳಿಂದಾಗಿ ನಿಂತುಹೋಯಿತು.

ಸಮಾಜ ಕಾರ್ಯಕರ್ತರೂ, ಶಿಕ್ಷಣವೇತರೊ, ಹೋರಾಟಗಾರರೂ, ಖ್ಯಾತವೈದ್ಯರೂ ಮತ್ತು ಪ್ರಖ್ಯಾತ ಸಮಾಜ ಸೇವಾಸಕ್ತರು ಆಗಿದ್ದ ಪಂಡಿತ ತಾರಾನಾಥ ಅವರು ರಾಯಚೂರು ಜಿಲ್ಲೆಗೆ ಮತ್ತು ಹೈದ್ರಾಬಾದ ಕರ್ನಾಟಕಕ್ಕೆ ವಿವಿಧ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆ ಅಪಾರವೂ, ಅನನ್ಯವೂ ಆಗಿದೆ. ಅವರ ಸೇವೆಯಿಂದ ಪತ್ರಿಕೋದ್ಯೆಮವೂ ಹೊರತಾಗಿಲ್ಲ.

೧೯೨೨ರ ಸುಮಾರಿನಲ್ಲಿ ರಾಯಚೂರಿಗೆ ಸಮೀಪದ ಶ್ರೀರಾಘವೇಂದ್ರ ಸ್ವಾಮಿಗಳ ಪಣ್ಯತಾಣವಾಗಿರುವ ಮಂತ್ರಾಲಯದ ಹತ್ತಿರ ತುಂಗಭದ್ರದಲ್ಲಿ ಪಂಡಿತ ತಾರಾನಾಆಥರು ಪ್ರಾರಂಭಿಸಿದ 'ಪ್ರೇಮ' ಕನ್ನಡ ಮಾಸ ಪತ್ರಿಕೆ ಬರೀ ವಿಶೇಷ ಅಲ್ಲ ವಿಶಿಷ್ಟವೂ ಆಗಿದೆ. ಅಂತಹ ಜನೋಪಯೋಗಿ, ಜನ ಸ್ನೇಹಿ ಪತ್ರಿಕೆಯೊಂದು ಆಗಿನ ಕಾಲದಲ್ಲಿ ಜನಸಾಮಾನ್ಯರ ಜಾಗೃತಿಗಾಗಿ, ಅವರ ಚೇತನವನ್ನು ಸಂಸ್ಕಾರಯುಕ್ತಗೊಳಿವುದಕ್ಕಾಗಿ ಸರ್ಮಪಿತವಾಗಿದ್ದುದ್ದು ವಿಶೇಷ ಉಲ್ಲೇಖನಿಯ. ಮಹಿಳೆಯರು ತಮ್ಮ ಮಕ್ಕಳನ್ನು ಯಾವ ರೀತಿಯಿಂದ ಸಂಸ್ಕಾರವಂತರನ್ನಾಗಿ ಬೆಳಸಿ ದೇಶದ ಜವಬ್ದಾರಿ ಪ್ರಜೆಗಳನ್ನಾಗಿ ಮಾಡಬೇಕೆಂಬ ವಿಷಯದಲ್ಲಿ 'ಪ್ರೇಮ' ಪತ್ರಿಕೆ ಅನನ್ಯ ಕಾಣಿಕೆ ನೀಡಿದೆ.

ಬಹುಮುಖ ಪ್ರತಿಭಾ ಸಂಪನ್ನರಾಗಿದ್ದ ತಾರಾಥರು ೧೯೨೧ರಲ್ಲಿ ತುಂಗಭದ್ರದಲ್ಲಿ 'ಪ್ರೇಮಾಯತನ್' ಎಂಬ ಆಶ್ರಮವನ್ನು ಸ್ಥಾಪಿಸಿ ಅಲ್ಲಿಯಲೇ 'ಪ್ರೇಮ' ಎಂಬ ತ್ರೈಮಾಸಿಕವನ್ನು ಕನ್ನಡ ಮತ್ತು ಇಂಗ್ಲೀಷ ಎರಡರಲ್ಲೂ ಪ್ರಾರಂಭಿಸಿದರು. ನಂತರ ಅದನ್ನು ಮಾಸಪತ್ರಿಕೆಯನ್ನಾಗಿ ಪರಿವರ್ತಿಸಿದರು.

ಪತ್ರಿಕೋದ್ಯಮದ ಉಗಮವಾಗುವಲ್ಲಿಯೇ ಈ ಭಾಗದಲ್ಲಿ ತಾರಾನಾಥರು ತಮ್ಮ ಪತ್ರಿಕೆಯ ಮೂಲಕ ಹಲವು ನವೀನ ಪ್ರಯೋಗಗಳನ್ನು ನಡಿಸಿರುವುದು ಗಮನಾರ್ಹ. ಆನರಿಗೆ ಮಾಹಿತಿ, ಶಿಕ್ಷಣ ನೀಡಿ ಅವರನ್ನು ಸರ್ವ ರೀತಿಯಿಂದಲು ಸಂಪನ್ನರಾಗಿ ಮಾಡುವ, ಅರನ್ನು ವೈಚಾರಿಕವಾಗಿ ಸಬಲೀಕರಣಗೊಳಿಸುವ ಪತ್ರಿಕೆಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅರಿತುಕೊಂಡುದ್ದ ಪಂಡಿತ ತಾರಾನಾಥರು ತಮ್ಮ ಉದ್ದೇಶ ಸಾಧನೆಗಾಗಿ ಪತ್ರಿಕೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿದರು.

ತಮ್ಮ ಉತ್ತೇಜಕ ಸಂದೇಶಗಳನ್ನು ಪ್ರಕಟಿಸಿ ಈ ಭಾಗದದಲ್ಲಿ ಜನ ಜಾಗೃತಿ ಉಂಟು ಮಾಡಲು ಅವರು 'ಪ್ರೇಮ'ದ ಮೂಲಕ ಬಹುವಾಗಿ ಶ್ರಮಿಸಿದರು. ಜನಸಾಮಾನ್ಯರ ಜ್ಞಾನಾಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಅವರ ಪತ್ರಿಕೆ ಅರಿವು ಮತ್ತು ಶಿಕ್ಷಣದ ಪ್ರಬಲ ಮಾಧ್ಯಮವಾಗಿತ್ತು. ವೈದ್ಯ ಶಾಸ್ತ್ರದ ಸುಲಭ ಚಿಕಿತ್ಸೆಯನ್ನು ಪ್ರಕಟಿಸುವ ಉದ್ದೇಶದಿಂದಲೇ ಅವರು ಪತ್ರಿಕೆಯನ್ನು ಹೊರಡಿಸಿದರು. ಕನ್ನಡ ನಾಡಿನ ಲೇಖನ ಲೇಖಕರ ಉನ್ನತಮಟ್ಟದ ಲೇಖನಗಳು ಅದರಲ್ಲಿ ಪ್ರಕಟವಾಗುತ್ತಿದ್ದವು.

ಇದಲ್ಲದೆ 'ತಾಯಂದಿರಿಗೆ' ಎಂಬ ಅಂಕಣದಲ್ಲಿ 'ಅಮ್ಮಾ' ಎಂಬ ಸಂಬೋಧನೆಯಿಂದ ಪತ್ರಗಳನ್ನು ಬರೆಯುತ್ತದ್ದರು. ಮಕ್ಕಳ ಸಮಸ್ಯಗಳನ್ನು ಚರ್ಚಿಸುವುದರ ಜೊತೆಗೆ ಮಕ್ಕಳನ್ನು ಸಚ್ಚಾರಿತ್ರ್ಯಶೀಲರನ್ನಾಗಿ ಬೆಳೆಸುವ ಕುರಿತು ಸರಳಭಾಷಯಲ್ಲಿ ಮನಕ್ಕೆ ನಾಟುವಂತೆ ಬರೆಯುತ್ತಿದ್ದರು. ಭಾರತೀಯ ತಾಯಂದಿರು ಮಕ್ಕಳ ಆರೋಗ್ಯವನ್ನು ಕಾಪಾಡುವಲ್ಲಿ ಯಾವ ರೀತಿಯಲ್ಲಿ ಎಷ್ಟರಿಕೆ ವಹಿಸಬೇಕು ಮತ್ತು ಮಕ್ಕಳ ನಿಜವಾದ ಸುಖದ ಮರ್ಮವನ್ನು ತಿಳಿದವಳೆ ನಿಜವಾದ ತಾಯಿ ಆಗುವವಳೆಂದು ಹೇಳುತ್ತಿದ್ದರು.

ಅನೇಕ ವಿದ್ಯಾರ್ಥಿಗಳ ಪತ್ರಗಳಿಗೆ ಅವರು 'ಪ್ರೇಮ'ದ ಮೂಲಕ ಉತ್ತರಿಸುತ್ತಿದ್ದುರು. ಸಣ್ಣ ಮಕ್ಕಳೆಂದರೆ ಅವರಿಗೆ ಬಹಳ ಪ್ರೀತಿ. ೧೯೨೪ರ ಒಂದು ಸಂಚಿಕೆಯಲ್ಲಿ ತಾರಾನಾಥರು ಒಂದು ಜಾಹಿರಾತನ್ನು ಕೊಟ್ಟಿದ್ದರು. ಅದು ಇಂದಿನ ಪತ್ರಿಕಾ ಜಗತ್ತನ್ನು ಅಣಕಿಸುವಂತೆ ತೀರಾ ವಿಬಿನ್ನವಾದ ಜಾಹಿರಾತು ಆಗಿತ್ತು. ಅದರ ಪ್ರಕಟಣೆ ಹೀಗಿತ್ತು. "ಆಶ್ರಮಕ್ಕೆ ಆರು ಮಂದಿ ಅನಾಥ ಬಾಲಕರು ಬೇಕಾಗಿದ್ದಾರೆ. ಅನ್ನ, ವಿದ್ಯ ಎಲ್ಲನೂ ಕೊಡಲ್ಪಡುವುದು." ಇಂತಹ ಜಾಹಿರಾತನ್ನು ಇಂದಿನ ಪತ್ರಿಕೆಗಳಲ್ಲಿ ಕಾಣಲು ಸಾಧ್ಯವೇನು?

'ಪ್ರೇಮ' ಪತ್ರಿಕೆಯಲ್ಲಿ ಅವರು 'ದಾಂಪತ್ಯ ದರ್ಶನ' ಎಂಬ ಲೇಖನ ಮಾಲೆಯನ್ನು ಪ್ರಾರಂಭಿಸಿದರು. ಅದರಲ್ಲಿ ರೋಗದ ಲಕ್ಷಣಗಳು, ಅವುಗಳ ನಿವಾರಣೆ ಕುರಿತು ಅತ್ಯುಪಯುಕ್ತ ಮಾಹಿತಿ ಇರುತ್ತಿತ್ತು.

ಪಂಡಿತ ತಾರಾನಾಥರು ಮಾಧ್ಯಮದ ಸಾಮರ್ಥ್ಯವನ್ನು ಪತ್ರಿಕೆಯ ಮೂಲಕವಷ್ಟೇ ಬಳಸಿಕೊಳ್ಳಲಿಲ್ಲ. ಅವರು ನಾಟಕ ಮಾಧ್ಯಮದ ಮೂಲಕವು ಸಮಾಜ ಸುಧಾರಣಾ ಕಾರ್ಯಕ್ಕೆ ಕೈ ಹಾಕಿದರು. ಸ್ವತಃ ಕೆಲವು ನಾಟಕಗಳನ್ನು ಬರೆದು ಪ್ರದರ್ಶಿಸಿದರು. ನಾಟಕವನ್ನು ಕುರಿತು ಅವರು ಹೇಳಿರುವ ಮಾತುಗಳು ಮನನೀಯವಾಗಿವೆ. "ನಾಟಕಗಳು ಸಮಾಜದ ಸದಾಚಾರ, ಸುವಿಚಾರ, ದುರಾಚಾರ, ಅತ್ಯಾರಗಳನ್ನು ಪ್ರೇಕ್ಷಕರಿಗೆ ತೋರಿಸಿ ಸನ್ಮಾರ್ಗವನ್ನು ಪಾತ್ರಗಳ ಸುಖ ದುಃಖಗಳ ಮೂಲಕ ಸೂಚಿಸಬೇಕು. ನಾಟಕವು ನೋಡುಗರ ಕೈಗನ್ನಡಿಯಾರಬೇಕು ಹೊರತು ಹಠವಾದಿಗಳ ನೆಲಮನೆಯಾಗಿರಬಾರದು."

ಅವರು ಬರೆದ ಅನೇಕ ನಾಟಕಗಳಲ್ಲಿ 'ದೀನ ಬಂಧು ಕಬೀರ' ಮತ್ತು 'ಮೋಹನ ಶಾಸ್ತ್ರ' ಪ್ರಮುಖವಾದವುಗಳು. ಕಬೀರ ನಾಟಕದಿಂದ ಮಹಾತ್ಮಗಾಂಧೀ ಅವರೂ ಪ್ರಭಾವಿತರಾದದ್ದು ಗಮನಾರ್ಹ. ತಾರಾನಾಥರು ಈ ನಾಟಕವನ್ನು ಹಿಂದಿಯಲ್ಲಿ ಬರೆದಿದ್ದರಿಂದ ಪ್ರಾಯಃ ಅದು ಗಾಂದೀಜಿ ಅವರ ಅವಗಾಹನೆಗೆ ಬರಲು ಸಾಧ್ಯವಾಯಿತು.

ಪಂಡಿತ ತಾರಾನಾಥರು ಓರ್ವ ಬದ್ಧತೆಯುಳ್ಳ ಪತ್ರಕರ್ತರಾಗಿದ್ದರು. ಪತ್ರಿಕೋದ್ಯಮ ಅವರ ಹತ್ತು ಹಲವು ಆಸಕ್ತಿಗಳಲ್ಲಿ ಒಂದಾಗಿತ್ತು. ಪತ್ರಿಕೋದ್ಯಮ ಅವರಿಗೆ ಜೀವನದ ದರ್ಶನವನ್ನು ಮಾಡುವ ಧ್ಯೇಯನಿಷ್ಠ ಸಾಧನವಾಗಿತ್ತು. ಪಂಡಿತ ತಾರಾನಾಥರಂತಹ ಪತ್ರಕರ್ತರು ದೊರೆಯುವುದು ದುರ್ಲಭ.

**ಇತರ ಪತ್ರಿಕೆಗಳು** 'ಪ್ರಭಾತ' ಮತ್ತು 'ನಾಗರಿಕ' ಪತ್ರಿಕೆಗಳು ನಿಂತು ಹೋದ ಮೇಲೆ ಕಲಿಗಣನಾಥ ಹಿರೇಮಠ ಅವರು ಹೈದ್ರಾಬಾದ ಕರ್ನಾಟಕದ ವಿಮೋಚನೆಗಾಗಿ ನಡೆದ 'ಪೋಲೀಸ್ ಆಕ್ಷನ್' ಹಾಗೂ 'ಸೇವಕ' ಎಂಬ ವಾರ ಪತ್ರಿಕೆಗಳನ್ನು ಪ್ರಾರಂಭಿಸಿದರು. ಸುಮಾರು ನಾಲ್ಕು ವರ್ಷಗಳ ಕಾಲ ಬದುಕಿದ್ದವು.

ಹಿರಿಯ ಕಾಂಗ್ರೆಸ್ ಧುರೀಣ ಜಿ. ಕೆ. ಪ್ರಾಣೇಶಚಾರ್ಯ ಅವರು 'ಸಾಧನಾ' ಎಂಬ ಕನ್ನಡ ಸಾಪ್ತಾಹಿಕವನ್ನು ಆರಂಭಿಸಿದರು. ಹೈದ್ರಾಬಾದ ಕರ್ನಾಟಕ ಜನತೆಯ ಕಷ್ಟ, ಸುಖ, ನೋವು ನಲಿವುಗಳನ್ನು ಪ್ರತಿಬಿಂಬಿಸುವುದು ಪತ್ರಿಕೆಯ ಮುಖ್ಯ ಉದ್ಧೇಶವಾಗಿತ್ತು. ತಮ್ಮ ಪತ್ರಿಕೆಗೆ 'ಸಾಧನಾ' ಎಂದು ಹೆಸರಿಡಲು ಪ್ರಾಣೇಶಚಾರ್ಯರಿಗೆ ಪ್ರೇರಣೆ ದೊರೆತದ್ದು ಹೈದ್ರಾದಿನ ಸಾನೆ ಗುರೂಜಿ ಅವರಿಂದ. ರಾಷ್ಟ್ರೀಯ ಸೇವಾದಳ ಮುಖಂಡರಾಗಿದ್ದ ಅವರು ಮರಾಠಿಯಲ್ಲಿ 'ಸಾಧನಾ' ಎಂಬ ಹೆಸರಿನ ಪತ್ರಿಕೆಯನ್ನು ಪ್ರಾರಂಭಿಸಿ ಜನ ಪ್ರಿಯಗೊಳಿಸಿದ್ದರು. ಪ್ರಾಣೇಶಾಚಾರ್ಯರು ಅದೇ ಹೆಸರಿನಲ್ಲಿ ಕನ್ನಡ ಪತ್ರಿಕೆ ಆರಂಭಿಸಿದರು. ಹೈದ್ರಾಬಾದಿನಲ್ಲಿ ಪ್ರಾರಂಭಿಸಲಾಗಿದ್ದ ಈ ಪತ್ರಿಕೆಯನ್ನು ರಾಜ್ಯ ಪುನರವಿಂಗಡಣೆಯ ನಂತರ ರಾಯಚೂರಿಗೆ ವರ್ಗಾಯಿಸಲಾಯಿತು. ಸದಭಿರುಚಿಯ ಜನಪ್ರಿಯ ಇದಾಗಿದ್ದರು ಬಹಳ ದಿನ ಮುಂದುವರೆಯಲಾಗಲಿಲ್ಲ. ಕೆಲವೇ ವರ್ಷಗಳಲ್ಲಿ ಅದು ನಿಂತು ಹೋಯಿತು.

'ಸಾಧನಾ ಪ್ರಿಂಟರ್ಸ್' ಎಂಬ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ 'ಹೂಮಾಲೆ' ಎಂಬ ಮಾಲಿಕೆಯಲ್ಲಿ ಶಾಸನ ಕವಿಗಳಿಂದ ಹಿಡಿದು ೧೯೫೦ರವರೆಗಿನ ಕವಿಗಳ ಕುರಿತು ಪುಸ್ತಕಗಳನ್ನು ಪ್ರಕಟಿಸಿದರು. ಡಿ. ಕೆ. ಭೀಮಮಸೇನರಾಯರ ಸಂಪಾದಕತ್ವದಲ್ಲಿ ಪುಸ್ತಕ ಹೊರಬಂದವು.

೧೯೫೫ರಲ್ಲಿ ಶಿರೂರು ವೀರಭದ್ರಪ್ಪನವರ ಸಂಪಾದಕತ್ವದಲ್ಲಿ ಕೊಪ್ಪಳದಲ್ಲಿ ಪ್ರಾರಂಭಿಸಿದ್ದ 'ಲೋಕವಾಣಿ' ಎಂಬ ವಾರಪತ್ರಿಕೆಯನ್ನು ರಾಯಚೂರಿಗೆ ಸ್ಥಳಾಂತರಿಸಲಾಯಿತು. ನಂದಳಿಕೆ ವಿಠ್ಠಲದಾಸ ಅವರ ನಾಯಕತ್ವದಲ್ಲಿ ಕೆಲ ಕಾಲ ನಡೆದ ಈ ಪತ್ರಿಕೆ ತನ್ನ ಅನುಚಿತ ನಡುವಳಿಕೆಯಿಂದಾಗಿ ಹೆಸರು ಕೆಡಿಸಿಕೊಂಡಿತು. ಕೆಲ ದಿನಗಳ ನಂತರ ಅದು ಮುಚ್ಚಿಯೂ ಹೋಯಿತು.

ಕೊಪ್ಪಳದ ಶಂಕರಪ್ಪ ಬಂಗಾರಶೆಟ್ಟರು ೧೯೫೬ ರಲ್ಲಿ 'ತುಗಭದ್ರ' ಎಂಬ ಕನ್ನಡ ವಾರಪತ್ರಿಕೆಯನ್ನು ಆರಂಭಿಸಿದರು.

೧೯೫೬ರಲ್ಲಿ ಅಬ್ದುಲ್ ರಹೀಂ ಎಂಬುವವರು 'ಸಂದೇಶ' ಎಂಬ

ಕನ್ನಡ ಮತ್ತು ಉರ್ದು ಭಾಷಯ ಪತ್ರಿಕೆಯನ್ನು ಹೊರತಂದರು. ಕನ್ನಡ ಪತ್ರಿಕೆ ಸುಮಾರು ಒಂದು ವರ್ಷ ಮತ್ತು ಉರ್ದು ಪತ್ರಿಕೆ ಸುಮಾರು ನಾಲ್ಕು ವರ್ಷ ಕಾಲ ನಡೆದವು.

ರಾಯಚೂರಿನ ಕರ್ನಾಟಕ ಸಂಘದ ಆಶ್ರಯದಲ್ಲಿ 'ವಿಜಯ' ಎಂಬ ಹೊಸ ಪತ್ರಿಕೆಯನ್ನು ೧೯೫೦ರ ದಶಕದಲ್ಲಿ ಹೊರತರಲಾಗುತ್ತಿತ್ತು. ೧೯೫೪ರ ಸುಮಾಸರಿನಲ್ಲಿ ಆರಂಭವಾದ ಈ ಪತ್ರಿಕೆ ಶ್ರೀಮತಿ ಸುಂದರಬಾಯಿ ಹುಣಸಗಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. ಈ ಪತ್ರಿಕೆ ಅಂದವಾಗಿ ಬರಲು ಕಾರಣವಾದವರು ರಾಯಚೂರಿನ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಮೊದಲ ವರದಿಗಾರರಾಗಿದ್ದ ರಾ. ಗು. ಜೋಶಿ ಮತ್ತು ಕೆ. ರಾಘವೇಂದ್ರರಾವ್ ಬಹಳಷ್ಟುಶ್ರಮಿಸಿದರು. ಉತ್ತಮ ಗುಣಮಟ್ಟದ 'ವಿಜಯ' ಸುಮಾರು ಐದಾರು ವರ್ಷಗಳಕಾಲ ನಡೆಯಿತು.

ಮೊದಲು ಕಲಬುರಗಿ ಜಿಲ್ಲೆಯಲ್ಲಿದ್ದ ಯಾದಗಿರಿಯಿಂದ ೧೯೪೯ರಲ್ಲಿ ಪ್ರಾರಂಭವಾದ 'ಅಮರವಾಣಿ' ಕನ್ನಡ ಮಾಸ ಪತ್ರಿಕೆನ್ನು ಡಿಸೆಂಬರ್ ೧೯೫೪ರಲ್ಲಿ ರಾಯಚೂರಿಗೆ ವರ್ಗಾಯಿಸಲಾಯಿತು. ಬಿ. ಎಂ. ವೀರೇಶ್ವರ ಶಾಸ್ತ್ರಿ ಇದರ ಸಂಪಾದಕರಾಗಿದ್ದರು. ಸುಮಾರು ಎರಡು ದಶಕದಷ್ಟು ದೀರ್ಘಕಾಲ ಬಾಳಿದ ಈ ಪತ್ರಿಕೆ, ತನ್ನ ಸಮಕಾಲಿನ ಸಂದರ್ಭದವರೆ ಪ್ರಕಟವಾಗುತ್ತಿದ್ದ ಈ ಭಾಗದ ಎಲ್ಲ ಪತ್ರಿಕೆಗಳಿಗಿಂತಲು ಇದು ದೀರ್ಘಾಯುಷ್ಯವನ್ನು ಹೊಂದಿತ್ತು. ಇದರ ಸಂಪಾದಕರು ತಮ್ಮದೆಯಾದ ಸ್ವಂತ ಮುದ್ರಣಾಲಯ ಹೊಂದಿದ್ದರು.

ಶ್ರೀ ಗೊರೇಬಾಳ ಹನುಮಂತರಾಯರು ೧೯೫೨ರ ಫೆಬ್ರವರಿಯಲ್ಲಿ 'ಶ್ರೀವರದೇಂದ್ರ ಕರ್ನಾಟಕ ಹರಿದಾಸ ಸಾಹಿತ್ಯ' ಎಂಬ ದ್ವೈಮಾಸಿಕವನ್ನ ಆರಂಭಿಸಿದರು. ಹರಿದಾಸ ಸಾಹಿತ್ಯ ವಿಚಾರ ತತ್ವ ಪ್ರಚಾರಕ್ಕಾಗಿ ಇದ್ದ ಈ ಪತ್ರಿಕೆ ೧೩೭ ಪುಟಗಳದ್ದಾಗಿದ್ದು ಸುಮಾರು ಎರಡು ವರುಷಗಳ ಕಾಲ ನಡೆಯಿತು.

ದಾಸ ಸಾಹಿತ್ಯಕ್ಕೆ ಸಂಬಂದಿಸಿದ್ದ ವಿಮರ್ಶಾತ್ಮಕ ಲೇಖನ, ಹೊಸ ಸಂಶೋದನೆ ಇತ್ಯಾದಿಗಳನ್ನು ಇದು ಒಳಗೊಂಡಿತ್ತು. ಸದಾಚಾರ, ಪಂಚಬೇದ, ಸಂಧ್ಯಾವಂದನೆ ಇತ್ಯಾದಿ ಕೆಲವು ನಿರ್ಧಿಷ್ಟ ವಷಯಾಧಾರಿತ ವಿಶೇಷ ಸಂಚಿಕೆಗಳನ್ನು ಅವರು ಹೊರತಂದರು.

೧೯೫೦ರ ಆಸುಪಾಸಿನಲ್ಲಿ 'ಸೀಮಾಮಾ' ಎಂದೇ ಖ್ಯಾತರಾದ ಶ್ರೀನಿವಾಸರಾವ್ ಕುಲಕರ್ಣಿ ಅವರು 'ಮಕ್ಕಳ ಪತ್ರಿಕೆ'ಯನ್ನು ಆರಂಭಿಸಿದರು. ಉಕ್ಲಿ ಮಧ್ವರಾವ್ 'ಜೋತಿ' ಎನ್ನುವ ಕೈಬರಹದ ಪತ್ರಿಕೆಯನ್ನು ಮೊದಲು ಆರಂಭಿಸಿ ನಂತರ ಅದನ್ನು ಮುದ್ರಿತ ಪತ್ರಿಕೆಯನ್ನಾಗಿ ಮಕಾಡಿದರು.

'ಪತ್ರೀಕ' ಎಂಬ ತ್ರೈಮಾಸಿಕ ಸಾಹಿತ್ಯಿಕ ಪತ್ರಿಕೆ ೧೯೬೯ರಲ್ಲಿ ಆರಂಭವಾಯಿತು. ಇದು ತನ್ನದೇಯಾದ ಸಂಪಾದಕ ಮಂಡಳಿಯನ್ನು ಹೊಂದಿತ್ತು. ಈ ಭಾಗದ ಖ್ಯಾತ ಸಾಹಿತಿಗಳಾದ ಶಾಂತರಸ, ಜಯತೀರ್ಥ ರಾಜಪುರೋಹಿತ, ಚಂದ್ರಕಾತ ಕುಸನೂರ, ರಾಜಶೇಖರ ನೀರಮಾನ್ವಿ ಮತ್ತು ವೈ. ಕೆ. ಚಂದ್ರಶೇಖರಪ್ಪ ಸಂಪಾದಕ ಮಂಡಳಿಯಲ್ಲಿದ್ದರು. 'ಪ್ರತೀಕ' ಉತ್ತಮ ಸಾಹಿತ್ಯಿಕ ಬರಹಗಳಿಂದ ಕೂಡಿದ್ದು ಸಾಹಿತ್ಯಾಸಕ್ತರಿಗೆ ಒಂದು ಒಳ್ಳೆಯ ಅಭಿವ್ಯಕ್ತಿಯ ಮಾಧ್ಯಮವಾಗಿತ್ತು.

ಎಸ್. ಪಿ. ದೇಶಪಾಂಡೆ ಅವರು ೧೯೬೯ರಲ್ಲಿ 'ಸಮಾಜ ವಿಕಾಸ' ಎಂಬ ಕನ್ನಡ ವಾರ ಪತ್ರಿಕೆಯನ್ನು ಆರಂಭಿಸಿ ನಂತರ ಅದನ್ನು ದಿನಪತ್ರಿಕೆಯನ್ನಾಗಿ ಪರಿವರ್ತಿಸಿದರು.

**ರಾಯಚೂರು ವಾಣಿ** ಜಿಲ್ಲೆಯ ಆಧುನಿಕ ಪತ್ರಿಕೋದ್ಯಮದ ಸಂದರ್ಭದಲ್ಲಿ 'ರಾಯಚೂರ ವಾಣಿ' ಪತ್ರಿಕೆಗೆ ವಿಶೇಷ ಸ್ಥಾನಮಾನ ಸಲ್ಲುತ್ತದೆ. ರಾಯಚೂರು ವಕೀಲರಾದ ಎನ್. ಕೆ. ಕುಲಕರ್ಣಿ ಅವರು ೧೯೨೦ರಲ್ಲಿ ಈ ಪತ್ರಿಕೆನ್ನು ಆರಂಭಿಸಿದರು. ಜಿಲ್ಲೆಯಾದ್ಯಂತ ಪ್ರಸಾರವಿದ್ದ ಈ ಪತ್ರಿಕೆ ಜಿಲ್ಲೆಯ ಪತ್ರಿಕೋದ್ಯಮದಲ್ಲಿ ಹೊಸದೊಂದು ಪರಂಪರೆಯನ್ನೆ ಆರಂಭಿಸಿತು. ರಾಜಕಾರಣ, ಸಾಹಿತ್ಯ, ಸಂಸ್ಕೃತಿ, ಚಳುವಳಿ ಇತ್ಯಾದಿ ಎಲ್ಲ ವಿಷಯನ್ನೊಳಗೊಂಡ ಒಂದು ಪರಿಪೂರ್ಣ ಸಾಪ್ತಾಹಿಕವಾಗಿ ರರುತಿದ್ದ ಪತ್ರಿಕೆಯ ವಿಶೇಷವೆಂದರೆ ಅದರಲ್ಲಿನ 'ತೀನ್ ಖಂದೀಲ ಕೆಳಗೆ' ಎಂಬ ಅಂಕಣ. ಅತ್ಯಂತ ಮೊನಚಾದ ವ್ಯಂಗ್ಯ, ವಿಡಂಬನೆ, ಹಾಸ್ಯದಿಂದ ಕೂಎಇರುತ್ತಿದ್ದ ಈ ಅಂಕಣವನ್ನು ಸಂಪಾದಕ ಎನ್. ಕೆ. ಕುಲಕರ್ಣಿ ಅವ್ರ ಬರೆಯುತ್ತಿದ್ದರು.

'ರಾಯಚೂರ ವಾಣಿ'ಯ ಜೀವಾಳವಾಗಿದ್ದ 'ತೀನ ಖಂದೀಲ ಕೆಳಗೆ' ಅಂಕಣಕ್ಕಾಗಿ ಓದುಗರು ಪ್ರತಿವಾರ ಆಸಕ್ತಿಯಿಂದ ಕಾಯುತ್ತಿದ್ದರು. 'ತೀನ ಖಂದೀಲ ಕೆಳಗೆ' ಎಂಬುದು ರಾಯಚೂರು ನಗರದ ಒಂದು ಜನಪ್ರಿಯ ಸಾರ್ವಜನಿಕ ಸ್ಥಳ. ಅಲ್ಲಿ ಎಲ್ಲ ತರಹದ ಜನ ಬಂದು ಸೇರಿ ಹರಟೆಯಲ್ಲಿ ತೊಡಗುತ್ತಿದ್ದರು. ಅದು ಶ್ರೀಸಾಮಾನ್ಯನ ಪ್ರಾತಿನಿಧಿಕ ಸಾರ್ವಜನಿಕ ಸ್ಥಳವಾಗಿತ್ತು. ರೋಚಕ ಸುದ್ಧಿಗಳೆಲ್ಲ ಅಲ್ಲಿಂದಲೆ ಪ್ರಾರಂಭವಾಗುತ್ತಿದ್ದವು. ಅದನ್ನು ಸಂಕೇತಿಸುವ ಅಂಕಣವೆ 'ತೀನ ಖಂದೀಲ ಕೆಳಗೆ'. ಈ ಅಂಕಣವನ್ನು ಅದರ ಗುಣ, ಸ್ವರೂಪ, ಸ್ವಭಾವದ ವಿಷಯಗಳಲ್ಲಿ ಕನ್ನಡದ ಸುಪ್ರಸಿದ್ಧ ದಿನಪತ್ರಿಕೆ 'ಪ್ರಜಾವಾಣಿ'ಯಲ್ಲಿ ಅಂದಿನ ಸಂಪಾದಕರಾದ ಟಿ. ಎಸ್. ರಾಮಚಂದ್ರರಾವ್ ಬರೆಯುತ್ತಿದ್ದ 'ಛೂ ಬಾಣ'ಕ್ಕೆ ಹೋಲಿಸಬಹುದು. ಜಿಲ್ಲೆಯ ಮಿಖ್ಯವಾಹಿನಿ ಪತ್ರಿಕೋದ್ಯಮಕ್ಕೆ ಅಪಾರ ಕೊಡುಗೆ ನೀಡಿದ ಶ್ರೇಯಸ್ಸು 'ರಾಯಚೂರ ವಾಣಿ'ಗೆ ಸಲ್ಲುತ್ತದೆ.

೧೯೨೩ರ ನವೆಂಬರ ೧ ರಿಂದ ದಿನಪತ್ರಿಕೆಯಾಗಿ ಮೈದಳೆದು 'ರಾಯಚೂರ ವಾಣಿ' ಅಂದಿನಿಂದ ಇಂದಿನವರೆಗೆ ನೋಡಿಯೇ ಇಲ್ಲ ರಾಯಚೂರು ಜಿಲ್ಲೆಯ ಇತಿಹಾಸದಲ್ಲೆ ಏಕೈಕ ದೀರ್ಘ ಕಾಲಿಕ ಪತ್ರಿಕೆಯಾಗಿರುವ 'ರಾಯಚೂರ ವಾಣಿ' ಹೈದ್ರಾಬಾದ ಕರ್ನಾಟಕದ ಆ ರೀತಿಯ ಅತಿ ವಿರಳ ಪತ್ರಿಕೆಗಳಲ್ಲಿ ಒಂದಾಗಿದೆ. ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಅದು ತನ್ನ ಪ್ರಭಾವವವನ್ನು ಬೆಳೆಸಿಕೊಂಡು ಬಂದಿದೆ.

ಶ್ರೀಮಾನ ಎನ್. ಕೆ. ಕುಲಕರ್ಣಿ ಅವರು ರಾಚೂರು ಜಿಲ್ಲೆಯ ಮೊದಲ ವೃತ್ತಿ ನೈಪುಣ್ಯತೆ ಸಾಧಿಸಿದ ಪತ್ರಕರ್ತ. ಮೂಸೂರಿನ ಮಹಾರಾಜ ಕಾಲೇಜಿನಲ್ಲ ಬಿ. ಎ. ಪತ್ರಿಕೋದ್ಯಮ ಪದವಿ ಪಡೆದು ಪತ್ರಿಕೋದ್ಯಮ ವೃತ್ತಿಗೆ ಬಂದವರು. ಅವರು ಮೈಸೂರಿನಲ್ಲಿ ಪತ್ರಿಕೋದ್ಯಮ ಅಭ್ಯಾಸ ಮಾಡುತ್ತಿದ್ದಾಗ ವಿಭಾಗ ಮುಖ್ಯಸ್ಥರಾದ ನಾಡಿಗ್ ಕೃಷ್ಣಮೂರ್ತಿ ಅವರ ಮೆಚ್ಚಿನ ಶಷ್ಯರಾಗಿದ್ದರು. ಪತ್ರಿಕೋದ್ಯಮ ಪದವಿ ಮತ್ತು ಕಾನೂನು ಪದವಿ ಮುಗಿಯುತ್ತಲೆ ಅವರು ರಾಯಚೂರಿನಲ್ಲಿ 'ಇಂಡಿಯನ್ ಎಕ್ಸಪ್ರೆಸ್, ಮತ್ತು 'ಕನ್ನಡ ಪ್ರಭ' ಪತ್ರಿಕೆಗಳ ವರದಿಗಾರರಾಗಿ ಸೇವೆ ಸಲ್ಲಿಸಿದರು. ಕೆಲ ಕಾಲ 'ಪ್ರೆಸ್ ಟ್ರಸ್ಟ್ ಆಪ್ ಇಂಡಿಯಾ' (ಪಿಟಿಐ) ಸುದ್ಧಿ ಸಂಸ್ಥೆಯ ವರದಿಗಾರರಾಗಿಯೂ ಕಾರ್ಯನಿರ್ವಹಿಸಿದರು. ಕುಲಕರ್ಣಿ ಅವರು ರಾಯಚೂರು ಜಿಲ್ಲೆಯ ಆಧುನಿಕ ಪತ್ರಿಕೋದ್ಯಮದ ಅದ್ವರ್ಯ ಎಂದರೆ ಅತಿಶಯೋಕ್ತಿಯೇನೂ ಆಗಲಾರದು.

'ರಾಯಚೂರ ವಾಣಿ' ಪತ್ರಿಕೆಯೂ ಕೆಲವು ಪತ್ರಕರ್ತರನ್ನು ತನ್ನ ಮಡಿಲಲ್ಲಿ ಪೊಶೀಷಿ, ಬೆಳೆಸಿ ರಾಜ್ಯಮಟ್ಟದ ಬೇರೆ ಬೇರೆ ಪತ್ರಿಕೆಗಳಲ್ಲಿ ಗುರುತಿಸಿಹೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಅವರಲ್ಲಿ ಪ್ರಮುಖರೆಂದರೆ ವಾದಿರಾಜ ದೇಸಾಯಿ ಇವರು 'ಕನ್ನಡ ಪ್ರಭ'ದಲ್ಲಿ ಸಂಪಾದಕೀಯ ವಿಭಾಗದಲ್ಲಿ ಟೈಮ್ಸ್ ಆಪ್ ಇಂಡಿಯಾ ಪತ್ರಿಕೆಯಲ್ಲಿ ಕೆಲಸಮಾಡಿದ್ದಾರೆ. ಇನ್ನೊಬ್ಬರು ವಾದಿರಾಜ ವ್ಯಾಸಮುದ್ರ ಇವರು ಗುಲ್ಬರ್ಗಾ ಆವೃತ್ತಿಯ 'ವಿಜಯ ಕರ್ನಾಟಕ' ಸ್ಥಾನಿಕ ಸಂಪಾದಕರಾಗಿದ್ದರು. ಈಗ ಇದೆ ಗುಲ್ಬರ್ಗಾ ಆವೃತಿಯ ವಿಜಯವಾಣಿ ಪತ್ರಿಕೆಯ ಸ್ಥಾನಿಕ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಯಚೂರಿನಲ್ಲಿ ಶಿಕ್ಷಕರಾಗಿದ್ದು ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದ 'ಅಲಾಪಿ ೧೯೨೩ರಲ್ಲಿ 'ಅಬೀರುಚಿ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿದರು. ಅಲಾಪಿ ಅವರ ಸಂಪೂರ್ಣ ಹೆಸರಾದ 'ಅಲ್ಲಾಭಕ್ಷ ಲಾಡಸಾಬ ಪಿಂಜಾರ'ದ ಸಂಕ್ಷಿಪ್ತ ನಾಮವಾಗಿದೆ. ಆರ್ಯ ಸಮಾಜ ಸೇರಿದ ನಂತರ ಅಲ್ಲಾಭಕ್ಷ 'ಅರವಿಂದ ಆರ್ಯ' ಆಗಿ ಮಾರ್ಪಾಡು ಹೊಂದಿದರು. ಕೆಲಸಮಯ ನಡೆದ ಪತ್ರಿಕೆ ನಂತರ ನಿಂತು ಹೋಯಿತು.

ಜಿಲ್ಲೆಯ ದೀಮಂತ ಪತ್ರಕರ್ತರಲ್ಲೊಬ್ಬರಾಗಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಜಿಲ್ಲೆಯ ಮೊದಲ ವರದಿಗಾರರಾಗಿದ್ದ ರಾ. ಗು. ಜೋಶಿ ಅವರು. ಎಸ್. ಜಿ. ಲೋಖಂಡೆ ಅವರೊಂದಿಗೆ ಸೇರಿ

೧೯೭೩ರಲ್ಲಿ 'ಕಾಂತಿ' ಎಂಬ ಪಾಕ್ಷಿಕವನ್ನು ಪ್ರಾರಂಭಿಸಿದರು. ಇದರಲ್ಲಿ ಪ್ರಕಟವಾಗುತ್ತಿದ್ದ 'ಅಂಧೇರಿ ನಗರ' ಎಂಬ ಅಂಕಣ ಓದುಗರ ಮೆಚ್ಚುಗೆಗೆ ಪಾತ್ರವಾಗಿತ್ತು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ (೧೯೭೫-೭೭) ಪ್ರಜೆಗಳ ಮೂಲಭೂತ ಹಕ್ಕುಗಳನ್ನೆಲ್ಲ ಸರಕಾರ ಸ್ಥಗಿತಗೊಳಿಸಿದ್ದಾಗ ಜನ ಜಾಗೃತಿ ಕಾರ್ಯಮಾಡಿ 'ಕಾಂತಿ' ತನ್ನದೆ ಆದ ರೀತಿಯಲ್ಲಿ ಜನಸೇವೆಗೈದಿದೆ.

೧೯೮೦ರ ದಶಕದ ಪೂರ್ವಾರ್ಧದಲ್ಲಿ ಡೋಣಿ ಎಂ. ಲೋಬೋ ಅವರು ಪ್ರಾರಂಭಿಸಿದ 'ಮಿತ್ರವಾಣಿ' ದಿನಪತ್ರಿಕೆ ತನ್ನ ಆಕ್ರಮಣಕಾರಿ ಧೋರಣೆಯಿಂದಾಗಿ ಹೊಸದೊಂದು ವಾತಾವರಣವನ್ನು ಪತ್ರಿಕಾ ಕ್ಷೇತ್ರದಲ್ಲಿ ಉಂಟುಮಾಡಿತು. 'ರಾಯಚೂರ ವಾಣಿ' ಯೊಂದೇ ಏಕಚಕ್ರಾಧಿಪತ್ಯ ಮೆರೆಯುತ್ತಿದ್ದ ಸಂದರ್ಭದಲ್ಲಿ ಆರಂಭವಾದ 'ಮಿತ್ರವಾಣಿ' ತನ್ನ ನಿಲುವು, ಸ್ವರೂಪ, ಶೈಲಿಯಲ್ಲಿ ತೀರಾ ಭಿನ್ನವಾಗಿದ್ದುದರಿಂದ ಅದು ಒಂದಿಷ್ಟು ಹೊಸ ಓದುಗರನ್ನು ಸೃಷ್ಟಿಸಿ, ಓಲೈಸಿಕೊಳ್ಳಲು ಯಶಸ್ವಿಯಾಯಿತು. ಆದರೆ ಆ ಪತ್ರಿಕೆ ಬಹಳ ದಿನ ನಡೆಯಲಿಲ್ಲ.

**ಸುದ್ದಿಮೂಲ:**

ಉದ್ಯಮಶೀಲತೆಗೆ ಹೆಸರಾದ ಬಸವರಾಜ ಸ್ವಾಮಿ ಅವರು ೧೯೮೮ರ ಬಸವ ಜಯಂತಿ ದಿನದಂದು 'ಸುದ್ದಿಮೂಲ' ಎಂಬ ಪಾಕ್ಷಿಕವನ್ನು ಆರಂಭಿಸಿದರು. ನಂತರ ದಿನಪತ್ರಿಕೆಯಾಗಿ ಮಾರ್ಪಾಡಗೊಂಡ 'ಸುದ್ದಿಮೂಲ ಗ್ರಾಮೀಣ ಭಾಗದಲ್ಲಿ ಸದ್ದಿಲ್ಲದೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿತು. ಮುಖ್ಯವಾಗಿ ಪತ್ರಿಕೋದ್ಯಮದ ಎಲ್ಲ ಲಕ್ಷಣಗಳನ್ನು ಹೊಂದಿದ ಈ ಪತ್ರಿಕೆ ರಾಯಚೂರು ಜಿಲ್ಲೆಗೆ ನೀಡಿದ ಸದಭಿರುಚಿ ಪತ್ರಿಕೆಯ ಮತ್ತೊಂದು ಕೊಡುಗೆಯಾಗಿದೆ.

'ಸುದ್ದಿಮೂಲ' ತನ್ನ ವ್ಯಾಪಕ ಪ್ರಸಾರ ಸಂಖ್ಯೆಯಿಂದ ಎಲ್ಲೆಡೆ ಹರಡಿದಲ್ಲದೆ ಗ್ರಾಮೀಣ ಭಾಗದ ಸುದ್ದಿಗಳಿಗೆ ಬಹಳಷ್ಟು ಪ್ರಾಮುಖ್ಯತೆಯನ್ನು ನೀಡಿತು. ಸಮಾಜದ ಅನೇಕ ಸಮಸ್ಯೆಗಳು ನಿರಂತರವಾಗಿ ಪ್ರಕಟವಾಗುತ್ತ ಆಡಳಿತ ಚುರುಕುಗೊಳ್ಳುವಂತೆ ಮಾಡಿತು ಈ ಪತ್ರಿಕೆ. ಈಜಿಲ್ಲೆಯ ಹಲವಾರು ಹಳ್ಳೀಗಳನ್ನು ತಲುಪಿರುವ 'ಸುದ್ದಿಮೂಲ' ಒಂದಿಷ್ಟು ಆಕ್ರಮಣಕಾರಿ ಶೈಲಿಯನ್ನು ಮೈಗೂಡಿಸಿಕೊಂಡಿದೆ. ಗ್ರಾಮೀಣ ಜನತೆಯ ನೋವು ನಲಿವುಗಳಿಗೆ ಸ್ಪಂದಿಸಿದ ಪತ್ರಿಕೆ ಜಿಲ್ಲೆಯಲ್ಲಿ ಗಟ್ಟಿಯಾದ ನೆಲೆಯನ್ನು ಕಂಡುಕೊಂಡಿದೆ.

ಸಂಪಾದಕರಾದ ಬಸವರಾಜ ಸ್ವಾಮಿ ಅವರು ಬರೀ ಪತ್ರಿಕೆಯನ್ನು ಪ್ರಾರಂಭಿಸಿ ಸುಮ್ಮನಾಗಲಿಲ್ಲ. ಇವರು ೨೦೦೩-೦೪ರಲ್ಲಿ ಸ್ಪಿಲ್ ಕಾಲೇಜ್ ಆಪ್ ಜರ್ನಲಿಸಮ್ ಎನ್ನುವ ಶಿಕ್ಷಣ ಸಂಸ್ಥೆ ಆರಂಭಿಸಿ ಬಿ. ಎ. ಪದವಿಯಲ್ಲಿ ಪತ್ರಿಕೋದ್ಯಮ ಒಂದು ಐಚಿಕ ವಿಷಯವನ್ನು ಆಸಕ್ತ ವಿದ್ಯಾರ್ಥಿಗಳಿಗೆ ಓದಲು ಅನವು ಮಾಡಿಕೊಟ್ಟಿದ್ದಾರೆ. ಇದರಿಂದಾಗಿ ಈ ಭಾಗದ ಪತ್ರಿಕೋದ್ಯಮ ಶಿಕ್ಷಣ ಪ್ರಸಾರಕ್ಕೂ ಮಹತ್ವದ ಕಾಣಿಕೆ ನೀಡಿದ್ದಾರೆ. ಪ್ರತಿ ವರ್ಷ ಒಟ್ಟು ಅರವತ್ತು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಗಣನೀಯ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಕೋರ್ಸಿನ ಪ್ರಯೋಜನ ಪಡೆಯುತ್ತಿದ್ದಾರೆ. ಇಲ್ಲಿ ಪದವಿಪಡೆದ ಅನೇಕ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಅಭ್ಯಾಸ ಮಾಡಿದ್ದಾರೆ. ಇನ್ನೂ ಕೆಲವರು ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಹಲವಾರು ಹೊಸ ಹೊಸ ಪತ್ರಿಕೆಗಳು ಜನ್ಮತಳೆದಿವೆ. ಎಂ. ಬಿ. ಪಾಟೀಲರ 'ನಿತ್ಯನೂತನ', ಬಿ. ಎಸ್. ದೇಶಪಾಂಡೆ ಅವರು 'ಸಮಾಜವಿಕಾಸ' (ಇದು ಹಳೆಯ ಪತ್ರಿಕೆ), ಶ್ರೀನಿವಾಸ ಕಸಬೆ ಅವರ 'ನವರಂಗ ಸಮಾಚಾರ', ಸಿ. ಎ. ಪಂಪಾಪತಿ ಸ್ವಾಮಿ ಅವರ 'ರಾಯಚೂರು ವಾರ್ತಾ ವಾಹಿನಿ', ಎಂ. ಎಸ್. ಜಾವೇದ ಅವರ ಇಂಗ್ಲೀಷ ದೈನಿಕ 'ಲೋಕ ಸ್ಟೈಲ್', ಸುಶೀಲೇಂದ್ರ ಸೋದೇಗಾರ ಅವರ 'ರಾಯಚೂರು ಪ್ರಭ' ಮುಂತಾದವು ಜಿಲ್ಲೆಯ ಪತ್ರಿಕೋದ್ಯಮದ ಬೆಳವಣಿಗೆಗೆ ಕಾಣಿಕೆ ನೀಡಿವೆ.

**ಜಿಲ್ಲೆಯ ಇತರಡೆ**

ಕನ್ನಡ ಪತ್ರಿಕೋದ್ಯಮ ಸಹಜವಾಗಿ ಶಕ್ತಿಯುತವಾಗಿರುವುದು. ಕೇಂದ್ರಿತ ಆಗಿರುವುದು ಜಿಲ್ಲಾ ಕೇಂದ್ರದಲ್ಲಿ ಆದಾಗ್ಯೂ, ಈ ಜಿಲ್ಲೆಯ ಇತರ ಭಾಗಗಳಲ್ಲಿಯೂ ಬೆಳೆದು ಬಂದಿರುವುದು ಗಮನಾರ್ಹ.

೧೯೭೧ರ ಸುಮಾರಿಗೆ ತ ಆಲೂಕು ಕೇಂದ್ರವಾದ ಮಾನ್ವಿಯಲ್ಲಿ ಮಲ್ಲಿಕಾರ್ಜುನ ಶಾಸ್ತ್ರಿ ಅವರು 'ಮಕರಂದ' ಎಂಬ ಪತ್ರಿಕೆಯನ್ನು ಪ್ರಾರಂಭೀಸಿದರು. ಶಾಆಸಕರಾದ ಜಿ. ಅಮರೆಗೌಡ ಅವರು ಸಿಂಧನೂರಿನಿಂದ 'ದುಡಿಮೆ' ಎಂಬ ಸಾಪ್ತಾಹಿಕವನ್ನು ೧೯೭೭ರಲ್ಲಿ ಪ್ರಾರಂಭಿಸಿದರು. ವಿ. ಪಿ. ನಾಡಗೌಡ ಪೋತ್ನಾಳ ಅವರು ಬರೆಯುತ್ತಿದ್ದ 'ಹರಟೆ' ಅಂಕಣ 'ದುಡಿಮೆ'ಯೆ ಆಕರ್ಷಣೆಯಾಗಿತ್ತು. ಆದರೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಅದು ಬಹುಕಾಲ ನಡೆಯಲಿಲ್ಲ.

ಜಿಲ್ಲೆಯ ಇತರ ಭಾಗಗಳಲ್ಲಿ ಜನ್ಮತಳೆದು ಸಾಕಷ್ಟು ಪ್ರಸಾರದಲ್ಲಿರುವ ಪತ್ರಿಕೆಗಳ ಪೈಕಿ ಗಂಗಾವತಿಯ 'ಪ್ರಜಾಪ್ರಪಂಚ' ಪ್ರಮುಖವಾದದ್ದು. ಈಗ ಇದು ಕೊಪ್ಪಳ ಜಿಲ್ಲೆಯಲ್ಲಿ ಬರುತ್ತದೆ. ಕನಕಗಿರಿಯ 'ಸುವರ್ಣಗಿರಿ' ಮತ್ತೊಂದು ಪತ್ರಿಕೆ. ಇದೂ ಕೂಡ ಈಗ ಕೊಪ್ಪಳ ಜಿಲ್ಲೆಯಲ್ಲಿ ಬರುತ್ತದೆ.

ಮಾನವಿಯಿಂದ ಪ್ರಕಟವಾಗುವ 'ಪ್ರಜಾಪತ್ರಿಕೆ' ಹಾಗೂ ಸಿಂಧನೂರಿನಿಂದ ಪ್ರಕಟವಾಗುವ ಮನೋಹರ ಮಸ್ಕಿಯವರ 'ಸುದ್ದಿ ಬಿಂಬ' ಜಿಲ್ಲೆಯ ಇತರೆಡೆ ಪ್ರಕಟವಾಗುವ ಕನ್ನಡ ದಿನ ಪತ್ರಿಕೆಗಳು. 'ಸುದ್ದಿ ಬಿಂಬ' ಮೊದಲು ವಾರಪತ್ರಿಕೆಯಾಗಿ ಪ್ರಾರಂಭವಾಗಿ ನಂತರ ದಿನಪತ್ರಿಕೆಯಾಯಿತು. ಪತ್ರಿಕೆಯನ್ನು ಆರಂಭಿಸಿದ ತರುಣ ಸಹಕಾರಿ ಧುರೀಣ ಮನೊಹರ ಮಸ್ಕಿ ಅವರು ೨೦೦೬ರಲ್ಲಿ ಈಶಾನ್ಯ ಪದವಿಧರರ ಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್ತಿಗೆ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ.

ಜಿಲ್ಲೆಯಲ್ಲಿ ಕೆಲವು ವಿಶೇಷ ಪತ್ರಿಕೆಗಳು ಪ್ರಕಟವಾಗುತ್ತವೆ. ಇವು ಬೇರೆ ಬೇರೆ ವಸ್ತು, ವಿಷಯಗಳಿಗೆ ಮೀಸಲಾಗಿವೆ. ರಾಯಚೂರಿನ ಅರುಣ ಬಿ. ಕಾಂತನವರ ಅವರ 'ಅಲೋಕನ' ಹೊಸ ಪುಸ್ತಕಗಳ ವಿಮರ್ಶೆಗೆ ಮೀಸಲಾದ ಪತ್ರಿಕೆ.

ವಕೀಲ ಚಂದ್ರಶೇಖರಯ್ಯ ಅವರು ಪ್ರಾರಂಭಿಸಿದ 'ಕಾನೂನು ಪ್ರಪಂಚ' ಮಾಸ ಪತ್ರಿಕೆ ಹೆಸರೆ ಸೂಚಿಸುವಂತೆ ಕಾಯ್ದೆ, ಕಾನೂನು, ನ್ಯಾಯ ಮುಂತಾದ ವಿಷಯಗಳಿಗಾಗಿ ಮುಡಿಪಾಗಿಟ್ಟ ವಿಶೇಷ ಪತ್ರಿಕೆಯಾಗಿದೆ.

ಚಂದ್ರಶೇಖರಯ್ಯನವರು ಮತ್ತೊಂದು ಸಾಹಸವನ್ನು ಮಾಡಿದ್ದಾರೆ. ಗ್ರಾಹಕರ ವಿಷಯಗಳಿಗೆ ಮೀಸಲಾದ ' ಗ್ರಾಹಕ ಪ್ರಪಂಚ' ಎಂಬ ಪಾಕ್ಷಿಕವನ್ನು ಅವರು ೧೯೯೨ರಲ್ಲಿ ಆರಂಭಿಸಿದರು. ರಾಯಚೂರು ಜಿಲ್ಲೆಯ ಪತ್ರಿಕೋದ್ಯಮಕ್ಕೆ ದೀರ್ಘವಾದ ಇತಿಹಾಸ ಇರಲಿಕ್ಕಿಲ್ಲ. ಈ ಮಾತು ಹೈದ್ರಾಬಾದ ಕರ್ನಾಟಕದ ಎಲ್ಲ ಜಿಲ್ಲೆಗಳಿಗು ಅನ್ವಯಿಸುವಂತಹದು. ಆದರೆ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ರಾಯಚೂರು ಜಿಲ್ಲೆಯಲ್ಲಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಂಭೀರ ಪ್ರಯೋಗ ನಡೆದಿರುವುದು ಸಮಾಧಾನಕರ.

೧೯೯೦ರ ದಶಕದಲ್ಲಿ ತಾರಾನಾಥರ 'ಪ್ರೇಮ', ೧೯೭೦ ದಶಕದ ಎನ್. ಕೆ. ಕುಲಕರ್ಣಿ ಅವರ 'ರಾಯಚೂರು ವಾಣಿ', ಎಂಭತ್ತರ ದಶಕದ ಉತ್ತಾರಾರ್ಧದ ಬಸವರಾಜ ಸ್ವಾಮಿ ಅವರ 'ಸುದ್ದಿ ಮೂಲ' ಚಂದ್ರಶೇಖರಯ್ಯನವರ ದ್ವಿಸಾಹಸ 'ಕಾನೂನು ಪ್ರಪಂಚ' ಮತ್ತು 'ಗ್ರಾಹಕ ಪ್ರಪಂಚ' ನಿಜಕ್ಕೂ ಮೌಲಿಕ ಪತ್ರಿಕೋದ್ಯಮದ ಉಲ್ಲೆಖನೀಯ ಉದಾಹರಣೆಗಳು.

**ಇತರ ಭಾಷಾ ಪತ್ರಿಕೆಗಳು** ರಾಯಚೂರು ಹೈದ್ರಾಬಾದ ಕರ್ನಾಟಕ ಇತರ ಜಿಲ್ಲೆಗಳಂತೆ ಬಹುಭಾಷಾ ಸಂಸ್ಕೃತಿಯ ಜಿಲ್ಲೆಯಾಗಿದ್ದರೂ ಕನ್ನಡೇತರ ಭಾಷೆಯ ಪತ್ರಿಕೋದ್ಯಮ ಇಲ್ಲಿ ಅಷ್ಟಾಗಿ ಬೆಳೆದು ಬಂದಿಲ್ಲ. ಕನ್ನಡೇತರ ಭಾಷಗಳಲ್ಲಿ ಉರ್ದು ಮತ್ತು ತೆಲುಗು ಬಲಾಢ್ಯವಾದವು. ಉರ್ದು ರಾಯಚೂರು ನಗರಕ್ಕೆ ಸೀಮಿತವಾಗಿದ್ದರೆ ತೆಲುಗು ಜಿಲ್ಲೆಯಾದ್ಯಂತ ಪ್ರಚಲಿತದಲ್ಲಿರುವಂತ ಭಾಷ. ಅಸಫಶಾಹಿ ನಿಜಾಮರ ಆಡಳಿತದಲ್ಲಿ ಉರ್ದು ಆಡಳಿತ ಭಾಷೆಯಾಗಿತ್ತಲ್ಲದೆ ಶಿಕ್ಷಣ ಮಾಧ್ಯಮದ ಭಾಷಯೂ ಆಗಿತ್ತು.

ಕರ್ನಾಟಕ ಏಕೀಕರಣವಾದ ಮೇಲಷ್ಟೇ ಅಂದರೆ ೧೯೫೬ರ ನಂತರ ಇಲ್ಲಿ ಕನ್ನಡ ಸರ್ವತಂತ್ರ ಸ್ವತಂತ್ರವಾಗಿ ಕಣ್ಣುತೆರೆಯಲು ಸಾಧ್ಯವಾಯಿತು. ಕನ್ನಡದ ಸ್ಥಿತಿ ಹೀನಾಯವಾಗಿದ್ದಾಗಲೂ ಕನ್ನಡ ಪತರಿಕೋದ್ಯಮ ಕಕ್ಕ ಮಟ್ಟಿಗೆ ಬೆಳೆದುಕೊಂಡು ಬಂದಿರುವುದು ಸಮಾಧಾನದ ಸಂಗತಿ.

ಉರ್ದು ಪಟ್ಟಣ ಪ್ರದೇಶದಲ್ಲಿ ಪ್ರಭಲವಾಗಿದ್ದರೆ, ತೆಲುಗು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ಬಲಾಢ್ಯವಾಗಿತ್ತು. ಆದರೆ ಸೋಜೀಗವೆಂದರೆ ತೆಲುಗು ಭಾಷೆಯ ಪತ್ರಿಕೆಗಳು ಇಲ್ಲಿ ಜನ್ಮ ತೆಳೆತಲಿಲ್ಲ.

ಆದರೆ ಉರ್ದು ಭಾಷೆಯ ಪತ್ರಿಕೆಗಳು, ವ್ಯಾಪಕ ಪ್ರಸಾರದ ದೃಷ್ಟಿಯಿಂದ ಅಲ್ಲವಾದರು ಕೆಲವಾದರೂ ಕಾಣಿಸಿಕೊಂಡಿವೆ.

ಅಧಿಕೃತ ಮಾಹಿತಿಯ ಪ್ರಕಾರ ಜಿಲ್ಲೆಯಲ್ಲಿ ೬೭ ಪತ್ರಿಕೆಗಳು ಪ್ರಕಟಗೊಳ್ಳುತ್ತವೆ. ಅವುಗಳಲ್ಲಿ ನಾಲ್ಕು ಉರ್ದು ಪತ್ರಿಕೆಗಳು ಸೇರಿವೆ. ಅವುಗಳಲ್ಲಿ ಮೂರು ದಿನಪತ್ರಿಕೆಗಳಾಗಿದ್ದರೆ ಒಂದು ಮಾಸ ಪತ್ರಿಕೆ, ಉರ್ದು ದೈನಿಕಗಳೆಂದರೆ: ಏಕ್ ಮಿನಾರ್, ಇಜಹಾರ–ಎ–ಹಕೀಕತ್ ಮತ್ತು ನಫಾರಾ. 'ಸಾಜ್–ಎ–ಹಯಾತ್' ಏಕೈಕ ಉರ್ದು ಮಾಸಪತ್ರಿಕೆ.

ಜಿಲ್ಲೆಯಲ್ಲಿ ಹೊರಡುವ ಏಕೈಕ ಇಂಗ್ಲಿಷ ದಿನಪತ್ರಿಕೆ ಎಂದರೆ 'ರಾಯಚೂರು ಆನ್‌ಲೈನ್'. 'ಲೋಕಸ್ಟೈಲ್' ಎಂಬ ದಿನಪತ್ರಿಕೆ ದ್ವಭಾಷಾ ಪತ್ರಿಕೆಯಾಗಿದ್ದು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಪ್ರಕಟಗೊಳ್ಳುತ್ತದೆ.

ಕನ್ನಡದ್ದೇ ಮೇಲುಗೈ

ಜಿಲ್ಲೆಯಿಂದ ಪ್ರಕಟವಾಗುವ ೬೭ ಅಧಿಕ ಪತ್ರಿಕೆಗಳ ಪೈಕಿ ಕನ್ನಡ ಪತ್ರಿಕೆಗಳದ್ದೇ ಸಿಂಹಪಾಲು. ದೈನಿಕ, ಸಾಪ್ತಾಹಿಕ, ಪಾಕ್ಷಿಕ, ದ್ವೈಮಾಸಿಕ ಹಾಗೂ ತ್ರೈಮಾಸಿಕ ಹೀಗೆ ವಿವಿಧ ನಿಯತಕಾಲಿಕ ಪತ್ರಿಕೆಗಳು ಇಲ್ಲಿಂದ ಪ್ರಕಟಗೊಳ್ಳುತ್ತವೆ. ಅತಿ ಹೆಚ್ಚು ಸಂಖ್ಯೆಯಲ್ಲಿ ಪಾಕ್ಷಿಕ ಪತ್ರಿಕೆಗಳು ಪ್ರಕಟವಾಗುತ್ತಿರುವುದು ಒಂದು ವಿಶೇಷ. ಅವುಗಳ ಸಂಖ್ಯೆ–೧೯. ತದ ನಂತರ ಸ್ಥಾನ ದೈನಿಕಗಳಿಗೆ. ಒಟ್ಟಾರೆ ಹದಿನೈದು ದಿನ ಪತರಿಕೆಗಳು ಜಿಲ್ಲೆಯಲ್ಲಿ ಪ್ರಕಟವಾಗುತ್ತವೆ. ಮೂರನೇ ಸ್ಥಾನದಲ್ಲಿ ಮಾಸ ಪತ್ರಿಕೆಗಳದ್ದು. ಅವುಗಳ ಸಂಖ್ಯೆ ೧೨. ಹನ್ನೊಂದು ಸಾಪ್ತಾಹಿಕ, ಒಂದು ದ್ವೈಮಾಸಿಕ ಹಾಗೂ ಒಂದು ತ್ರೈಮಾಸಿಕ ಪ್ರಕಟಗೊಳ್ಳುವ ಪತ್ರಿಕೆಗಳು ಪಟ್ಟಿಯಲ್ಲಿವೆ.

**ದಿನ ಪತ್ರಿಕೆ** ಅಖಂಡ ಕರ್ನಾಟಕ, ಈಶಾನ್ಯ ಕಿರಣ, ಈಶಾನ್ಯ ಟೈಮ್ಸ್, ಕೃಷ್ಣ ತುಂಗೆ, ಮುಂಜಾವಿನ ವರದಿ, ನಿತ್ಯ ನೂತನ, ಪ್ರಭಾವಾಣಿ, ಪ್ರಜಾ ಪ್ರಪಂಚ, ರಾಯಚೂರುವಾಣಿ, ರಾಯಚೂರು ಪ್ರಭ, ರಾಯಚೂರು ವಾರ್ತೆ, ಸಮಾಜ ವಿಕಾಸ, ಸಿಂಧನೂರ ಸಿಂಧೂರವಾಣಿ, ಸುದ್ದಿದೂತ ಮತ್ತು ಸುದ್ದಿ ಮೂಲ.

**ವಾರ ಪತ್ರಿಕೆಗಳು** ಆರಕ್ಷಕ ಚಿಂತಕ, ದುಡಿಮೆ, ಈಶಾನ್ಯ ಕರ್ನಾಟಕ, ಕಿಷ್ಕಿಂಧೆ ವಾರ್ತಾ, ಲೋಕವಾಣಿ, ಮಿತ್ರವಾಣಿ, ಪ್ರಜಾತೀರ್ಪು, ಸಿಂಧೂರ ಬಿಂಬ, ಸುದ್ದಿ ಸಮರ, ವಾರ್ತಾ ಮಿತ್ರ, ವಾರ್ತಾವಾಹಿನಿ.

**ಪಾಕ್ಷಿಕ** ಬೆಳದಿಂಗಳು, ಬೆಂಕಿ ಪತ್ರಿಕೆ, ಈಸಾನ್ಯ ಕ್ರಾನಿಕಲ್, ಹಾರ್ಯ್‌ಗಲಗ್, ಹೈದ್ರಾಬಾದ ಕರ್ನಾಟಕ, ಕಲ್ಯಾಣ ಕರ್ನಾಟಕ, ಕಂಪನ ಕಾಂತಿ, ಪ್ರಜಾ ದರ್ಬಾರ, ಪ್ರಜಾ ಸಮರ, ಪಜ್ಞಾ ಪ್ರತಿಕ್ಷಾ, ರಾಯಚೂರು ಮಿತ್ರ, ರಾಯಸಿರಿ, ಸುದ್ದಿ ಸೇತುವೆ, ಉದಯ ಕಿರಣ, ಉದಯ ಧ್ವಜ, ವಿಜಯ ಗರ್ಜನೆ, ಎಡೆದೊರೆನಾಡು.

**ಮಾಸಿಕ** ಅಭಿರುಚಿ, ಚಂದ್ರನಾಡಿ, ಏಕಲವ್ಯ ವಾರ್ತೆ, ಕಾನೂನು ಪ್ರಪಂಚ, ಮಹಿಳಾ ಸಿಂಧೂರ, ರಾಯಚೂರು ವಾಯ್ಸ್, ಸತ್ಯರಾಯಭಾರಿ, ಸವಿತಾ ಪ್ರಪಂಚ, ವಾಲ್ಮೀಕಿ ಸಂಪದ, ವೀರಶೈವ ಜಾಗೃತಿ, ವಿಜಯ, ಯಶಸ್ವಿ. 'ಶಿಕ್ಷಣ ಮಿತ್ರ' ಇದು ದ್ವೈಮಾಸಿಕವಾಗಿದೆ ಮತ್ತು ವಾಣಿಜ್ಯ ಮತ್ತು ತೆರಿಗೆ' ತ್ರೈಮಾಸಿಕ ಇವು ಕನ್ನಡ ಪತ್ರಿಕೆಗಳಾಗಿವೆ.

**ಗ್ರಂಥ ಋಣ**


೧. ಭಾರತೀಯ ಪತ್ರಿಕೋದ್ಯಮ – ನಾಡಗ ಕೃಷ್ಣಮೂರ್ತಿ.
೨. ವೃತ್ತಪತ್ರಿಕೆ, ಅದರ ಚರಿತ್ರೆ, ಅದರ ಕರ್ತವ್ಯ, ಅದರ ಸ್ವಾತಂತ್ರ್ಯ–ಡಿ.ವಿ.ಜಿ
೩. ಮುದ್ರಣ ಸಮೀಕ್ಷೆ  ಎಚ್, ನರಸಣ್ಣ
೪. ನೂತನ ಮುದ್ರಣ ವಿಧಾನಗಳು – ಬಿ. ಪಿ. ಮಲ್ಲರಾಜ ಅರಸು.
೫. ಕನ್ನಡ ಪತ್ರಿಕೆಗಳು  ಡಾ. ಪ್ರಭು ಖಾನಾಪುರೆ; ಕಲ್ಬುರ್ಗಿ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯೆಲಯ.
೬. ಕನ್ನಡ ಪತ್ರಿಕೆಗಳು  ಡಾ. ಈ. ಬಿ ವಿಸಾಜಿ; ಬೀದರ್ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯೆಲಯ.
೭. ಪತ್ರಿಕೋಧ್ಯಮ; ಸಾಧನೆ ಮತ್ತು ಸವಾಲುಗಳು – ಬಸವರಾಜ ಆಕಳವಾಡಿ ಕೊಪ್ಪಳ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯಾಲಯ.
೮. ಹೈದ್ರಾಬಾದ್ ಕರ್ನಾಟಕದ ಕನ್ನಡ ಪತ್ರಿಕೋಧ್ಯಮದ ಕತೆ – ಪ್ರೋ. ವಸಂತ ಕುಶ್ಟಗಿ, ಸಂಯುಕ್ತ ಕರ್ನಾಟಕ;
೯. ಹೈದ್ರಾಬಾದ್ ಕರ್ನಾಟಕದ ಕನ್ನಡ ಪತ್ರಿಕೋಧ್ಯಮ  ಒಂದು ನೋಟ; ಶ್ರೀನಿವಾಸ ಗಟ್ಟು; 'ತಿರುಳ್ಗನ್ನಟ' ಸ್ಮರಣ ಸಂಚಿಕೆ, ಅಖಿಲ ಭರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ.
೧೦. ಹೈದ್ರಾಬಾದ್ ಕರ್ನಾಟಕ ಹಾಗೂ ಪಂಡಿತ ತಾರಾನಾಥರು  ಡಾ. ಎನ್ ಎ. ಪಾಟಿಲ್.
೧೧. ಅಶೋಕನ ಧರ್ಮ ಶಾಸನಗಳು  ಡಾ. ಶ್ರೀನಿವಾಸ ರಿತ್ತಿ.
೧೨. ಕನ್ನಡನಾಡಿನ ಶಾಸನಗಳು  ಡಾ. ಪಿ. ಬಿ. ದೇಸಾಯಿ
೧೩. ಕಿರಿಯರ ಕರ್ನಾಟಕ (ಯುವಕರ ವಿಶ್ವಕೋಶ)  ಕನ್ನಡ ವಿಶ್ವವಿದ್ಯಾಲಯ, ಹಂಪ್ಿ
೧೪. ಗುಲ್ಬರ್ಗಾ ಜಿಲ್ಲಾ ಗ್ಯಾಸ್‌ಟಿಯರ್.